# ನಾದನೂಪುರ ವಂಡಾರು

# Nadanoopura Vandaru




ಮುಖ್ಯಸ್ಥರು – ವಂಡಾರು ಗೋವಿಂದ
97418 47278
ಪ್ರಧಾನ ಸಂಪಾದಕರು – ಶುಭಾಶಯ
ಗೌರವ ಸಂಪಾದಕರು – ಅಜಿತ್ ಕಾರಂತ್
94496 86807

Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – https://nyt.1ngo.in/

**75 ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ವಿಶೇಷ**

ಪರಿವಿಡಿ

ಬೋರ್ಡ್ ರೂಮ್
ಸಂಪಾದಕೀಯ
ಯಕ್ಷಗಾನ – ಸ್ವಾತಂತ್ರ್ಯ ಪೂರ್ವದ ನೋಟ
ರಾಷ್ಟ್ರ ಪ್ರೇಮಕ್ಕೆ ಯಕ್ಷಗಾನ ಪ್ರಸಂಗ ಸಾಹಿತ್ಯದ ಕೊಡುಗೆ
ಬಿಟ್ಟ ಮೈ ವೇಷದ ತಾಂತ್ರಿಕ ಸಮಸ್ಯೆಗಳು
ಕಾಲಮಿತಿ ಯಕ್ಷಗಾನ ಅನಿಸಿಕೆ– ಎಂ.ಕೆ ರಮೇಶ್ ಆಚಾರ್
ಕುಂಜಾಲು ಶೈಲಿಯ ಭಾಗವತ ನೆರಿಯ ಮರಿಯಪ್ಪಾಚಾರ್
ಧೀರ ಕಲೆಯೊಳಗೆ ಕೀರವಾಣಿಯರು – ಶ್ರೀಮತಿ ರತ್ನಾವತಿ ಹೆಚ್. ಎಂ. ತಲಂಜೇರಿ
ಕಾಡುವ ಪಾತ್ರ – 1. ಕೆದಿಲ ಜಯರಾಮ್ ಭಟ್
2. ಚೆನ್ನಪ್ಪ ಗೌಡ ಸಜಿಪ
ನಮ್ಮ ಲೈಬ್ರರಿ –ಯಕ್ಷಗಾನ ಪ್ರಸಂಗಗಳಲ್ಲಿ ದ್ರೌಪದಿ
ಚಾರಿಟಿ ರೂಮ್

## ಬೋರ್ಡ್ ರೂಂ



**ಗೋವಿಂದ ವಂಡಾರು**

**ಆತ್ಮೀಯರೇ,**

ನಮ್ಮ ಸಕಲ ಓದುಗರಿಗೆ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು. ನಾದ ನೂಪುರ ಡಿಜಿಟಲ್ ಯಕ್ಷ ಪತ್ರಿಕೆಯ ಆರನೇ ಸಂಚಿಕೆಯನ್ನು ನಿಮ್ಮ ಕೈಯ್ಯಲ್ಲಿಡುತ್ತಿದ್ದೇವೆ. ಈ ಸಮಯ ನಮ್ಮ ಬೆಳವಣಿಗೆಯನ್ನು ನಾವೇ ಅವಲೋಕನ ಮಾಡಿಕೊಳ್ಳುವುದು ಮುಂದಿನ ಯೋಜನೆಗಳಿಗೆ ಪೂರಕ ಎಂದು ನಾನು ಭಾವಿಸುತ್ತೇನೆ. ನಮ್ಮ ವಿಚಾರಗಳು(ಪತ್ರಿಕೆ), ಎಷ್ಟು ಜನರಿಗೆ ತಲುಪಿದೆ, ಪತ್ರಿಕೆಯಲ್ಲಿ ಆಯ್ದುಕೊಂಡಂತಹಾ ಸುದ್ದಿಗಳ ಗುಣಮಟ್ಟ, ಇನ್ನೂ ಯಾವ ರೀತಿ ಉತ್ತಮಪಡಿಸಬಹುದು ಇವೆಲ್ಲದರ ಒಂದು ಕಿರು ಅವಲೋಕನವನ್ನು ನಿಮ್ಮ ಮುಂದಿಡುತ್ತಿದ್ದೇನೆ. ಓದುಗರನ್ನು ತಲುಪುವಲ್ಲಿ ಮೊದಲೆರಡು ಸಂಚಿಕೆಗಳ ಹಂಚಿಕೆ ಆಮೆ ಗತಿಯಲ್ಲಿ ಸಾಗಿತ್ತು ಎಂಬುದನ್ನು ಅರಿತ ನಮ್ಮ ತಂಡ ಪತ್ರಿಕೆಯ ತಲುಪುವಿಕೆಯನ್ನು ಹೆಚ್ಚಿಸುವಲ್ಲಿ ವಿವಿಧ ತಂತ್ರಗಳನ್ನು ಅಳವಡಿಸಿಕೊಂಡೆವು. ಮೊದಲನೆಯದಾಗಿ ಪೂರ್ತಿ ಪತ್ರಿಕೆಯನ್ನು ವಿವಿಧ ಜಾಲತಾಣಗಳ ಗುಂಪುಗಳಲ್ಲಿ ಹಂಚಿಕೊಂಡು ನಂತರ ಪ್ರತಿ ಪುಟಗಳು ಹಾಗೂ ಲೇಖನಗಳನ್ನು ಬೇರೆಬೇರೆಯಾಗಿಯೇ ಹಂಚಿಕೊಳ್ಳುತ್ತಾ ಬಂದೆವು. ಇದರಿಂದ ಪತ್ರಿಕೆಯ ಲೇಖನಗಳನ್ನು ಓದುವವರ ಸಂಖ್ಯೆ ಹೆಚ್ಚುತ್ತಾ ಹೋಯಿತು. ಅದಕ್ಕೆ ಸಾಕ್ಷಿ ಎಂಬಂತೆ ಜಾಲತಾಣಗಳಲ್ಲಿ ಆ ವಿಷಯಕ್ಕೆ ಸಂಬಂಧಿಸಿ ಸಂವಾದಗಳು ಬೆಳೆಯುತ್ತಾ ಹೋದವು. ಇದೊಂದು ನಾವು ಕಂಡಂತಹಾ ಉತ್ತಮ ಬೆಳವಣಿಗೆ, ಹಾಗೂ ನಮ್ಮ ಪತ್ರಿಕೆಗೆ ಸಿಕ್ಕ ಪ್ರೋತ್ಸಾಹವೂ ಹೌದು. ಇದರಿಂದ ಯಕ್ಷಗಾನ ಪ್ರಿಯರಿಗೆ ಎಂತಹಾ ಸುದ್ದಿ ಲೇಖನಗಳನ್ನು ಸಿದ್ದಪಡಿಸಬೇಕು ಎಂಬುದರ ಚಿತ್ರಣ ಇನ್ನಷ್ಟು ಸ್ಪಷ್ಟವಾಗಿ ಲಭಿಸಿತು. ಸದಭಿರುಚಿಯ, ಓದುಗರನ್ನು ಚಿಂತನೆಗೆ ಹಚ್ಚಬಲ್ಲ ಲೇಖನಗಳು ಪತ್ರಿಕೆಯನ್ನು ಇನ್ನಷ್ಟು ಪ್ರಚಾರಕ್ಕೆ ತಂದಿವೆ. ಇಂದು ನಾದನೂಪುರ ಡಿಜಿಟಲ್ ಪತ್ರಿಕೆ ತನ್ನದೇ ಆದ ಓದುಗರ ಸಮೂಹವನ್ನು ಸೃಷ್ಟಿಸಿಕೊಂಡಿದೆ. ಸತತ ಅಧ್ಯಯನಗಳ ಆಧಾರಿತವಾಗಿ ಮೂಡಿ ಬಂದಿರುವ ಪತ್ರಿಕೆಯಿದು. ಶಾಂತಾರಾಮ ಕುಡ್ವ, ರವಿ ಮಡೋಡಿಯವರ ಪ್ರಚಲಿತ ವಿಚಾರಗಳ ವಿಮರ್ಶೆ, ಅಜಿತ್ ಕಾರಂತರ ಪತ್ರಿಕೆಯ ತಿಂಗಳ ವಿಶೇಷತೆ ಕುರಿತು ಸರಳ ನಿರೂಪಣೆಯ ಸಂಪಾದಕೀಯ, ಪ್ರೊ. ಉದಯ್ ಕುಮಾರ್ ಶೆಟ್ಟಿಯವರ ಕಲಾವಿದರ ವ್ಯಕ್ತಿ ಚಿತ್ರಣ, ಸಾಯಿ ಸುಮಾ ನಾವುಡರ ಮುನ್ನೆಲೆಗೆ ಬಾರದ ಮಹಿಳಾ ಸಾಧಕಿಯರ ಸರಣಿ ಲೇಖನಗಳು, ಆಸಕ್ತ ಬರಹಗಾರರ ಆಯ್ದ ಲೇಖನಗಳು, ಯಕ್ಷಗಾನ ಕಲಾವಿದರ ಪ್ರಮುಖ ಘಟನಾವಳಿಗಳ ಕಿರು ಸಂದರ್ಶನದ ಅಕ್ಷರ ರೂಪ ಇವೆಲ್ಲವನ್ನೂ ಒಳಗೊಂಡು ಇದೊಂದು ಅಪರೂಪದ ಯಕ್ಷ ಪತ್ರಿಕೆ ಎಂದೆನಿಸಿಕೊಂಡಿದೆ. ಪ್ರತೀ ತಿಂಗಳೂ ಪತ್ರಿಕೆಗೆ ಲೇಖನಗಳನ್ನು ಕ್ರೋಢೀಕರಿಸುವ, ಹಾಗೂ ಅಂತಿಮಗಳಿಸುವ ಶ್ರಮ ಬಹಳ ದೊಡ್ಡದು. ಆಯಾ ತಿಂಗಳ ವಿಶೇಷತೆ, ಯಾವ ವಿಷಯದ ಮೇಲೆ ಲೇಖನ ಸಿದ್ಧ ಪಡಿಸಬೇಕು, ಯಾವ ವಿಷಯವನ್ನು ಯಾರು ಸಮರ್ಥವಾಗಿ ಮಂಡಿಸಬಲ್ಲರು, ಯಾವ ಲೇಖನದ ಮೇಲೆ ಯಾವ ರೀತಿಯ ಪ್ರತಿಕ್ರಿಯೆಗಳು ಬಂದೀತು, ವಿವಾದಾತ್ಮಕ ವಿಚಾರಗಳಿಂದ ಯಾವ ಪರಿಣಾಮಗಳನ್ನು ಎದುರಿಸಲು ಸಿದ್ಧರಾಗಿರಬೇಕು, ಅದರ ಸವಾಲುಗಳೇನು? ಹೀಗೆ ಹಲವು ದಿಕ್ಕುಗಳಿಂದ ಯೋಚನೆ ಮಾಡಿ ಲೇಖನಗಳನ್ನು ಅಂತಿಮಗೊಳಿಸುತ್ತಿದ್ದೆವು. ತಿಂಗಳ ಪ್ರಾರಂಭದಲ್ಲಿ ಸಕಾಲಿಕ ಸೂಕ್ತ ಹಾಗೂ ಮೌಲ್ವಿಕ ಎಂದೆನಿಸುವ ಸುದ್ದಿಗಳನ್ನೊಳಗೊಂಡ ಪತ್ರಿಕೆಯನ್ನು ನಿಮಗೆ ಒದಗಿಸುವಲ್ಲಿ ಇಂದಿನವರೆಗೂ ಯಶಸ್ವಿಯಾಗಿದ್ದೇವೆ. ಆ ಕಾರಣಕ್ಕಾಗಿಯೇ ಈ ಪತ್ರಿಕೆಯ ರೀಚ್ (ತಲುಪುವಿಕೆ/ಮುಟ್ಟುವಿಕೆ/ಗೋಚರ) ಹೆಚ್ಚಾಗಿದೆ. ಮುಂದೆಯೂ ಇದೇ ಗುಣಮಟ್ಟದ ಪತ್ರಿಕೆಯನ್ನು ನಿಮಗೆ ತಲುಪಿಸುವಲ್ಲಿ ನಮ್ಮ ಶ್ರಮ ನಿರಂತರವಾಗಿರುತ್ತದೆ. ಜೊತೆಗೆ ಪತ್ರಿಕೆಯ ಒಂದು ವರ್ಷದ ಸಂಭ್ರಮಕ್ಕೆ ಸಿದ್ಧತೆಯನ್ನೂ ಮಾಡಿಕೊಳ್ಳುತ್ತಿದ್ದೇವೆ. ನಿಮ್ಮ ಪ್ರೋತ್ಸಾಹ, ಸಹಕಾರ ಬೆಂಬಲ ಸದಾ ಇರಲಿ – **ಗೋವಿಂದ ವಂಡಾರು**

*ನಿಮಗಿದು ಗೊತ್ತೇ? – ಶ್ರದ್ದೆಯ ಆವರಣದಲ್ಲಿ ನಡೆಯುವ ಕಲಾಸೇವೆಯಲ್ಲಿ ಕಲಾವಿದ ನಿತ್ಯ ಮಾಡುವ ವಂದನೆಗಳಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಎಂಬ ಲೆಕ್ಕವಿದೆ.*

*ವೇಷಧಾರಿಯ ನಮಸ್ಕಾರಗಳು ಐದು. ೧.ಗೆಜ್ಜೆ ಕಟ್ಟಿಕೊಳ್ಳುವಾಗ ಗೆಜ್ಜೆಗೆ, ೨.ಮುಖಕ್ಕೆ ಬಣ್ಣ ತಾಗಿಸುವಾಗ ಮುಖಕ್ಕೆ ೩.ಕಿರೀಟ ಕಟ್ಟಿಕೊಳ್ಳುವಾಗ ಕಿರೀಟಕ್ಕೆ ೪.ರಂಗಸ್ಥಳ ಪ್ರವೇಶಿಸುವಾಗ ಭೂಮಿಗೆ ೫.ಹಿಮ್ಮೇಳದವರಿಗೆ*

*ಚೆಂಡೆಯವನ ನಮಸ್ಕಾರಗಳು ನಾಲ್ಕು – ೧.ತಾಳಕ್ಕೆ ೨.ಶ್ರುತಿಗೆ ೩.ಮದ್ದಳೆಗೆ ೪.ಚೆಂಡೆಗೆ ಮದ್ದಳೆಗಾರನ ನಮಸ್ಕಾರಗಳು ಮೂರು – ೧.ತಾಳಕ್ಕೆ ೨.ಶ್ರುತಿಗೆ ೩.ಮದ್ದಳೆಗೆ.*

*ಭಾಗವತರ ನಮಸ್ಕಾರಗಳು ಎರಡು – ೧.ತಾಳಕ್ಕೆ ೨.ಶ್ರುತಿಗೆ ವಿನಾಯಿತಿ – ಕೋಡಂಗಿ ಬಾಲ ಕಲಾವಿದ. ಆತ ರಂಗದ ಶಿಶು. ಆತ ಚೌಕದಲ್ಲಿ ಆರತಿಯಾಗುವಾಗ ಗಣಪತಿಗೆ ನಮಸ್ಕಾರ ಮಾಡಿ ಆರತಿ ತಟ್ಟೆಯ ಕುಂಕುಮವನ್ನು ಹಣೆಗಿಟ್ಟುಕೊಂಡರೆ ಅಷ್ಟೇ ಸಾಕು – (ಮಾಹಿತಿ – ಗೋಪಾಲ್ ರಾವ್ – ರಂಗ ವಿದ್ಯಯ ಹೊಲಬು ಪುಸ್ತಕದಿಂದ)*

## ಸಂಪಾದಕೀಯ



**ಅಜಿತ್ ಕಾರಂತ್**
**ಗೌರವ ಸಂಪಾದಕರು**

***ಪ್ರೀತಿಯ ಓದುಗರಿಗೆ ಗೌರೀ- ಗಣೇಶಹಬ್ಬದ ಹಾರ್ದಿಕ ಶುಭಾಶಯಗಳು.***

ಅನ್ಯ ಕಲಾರಂಗದಲ್ಲಿಲ್ಲದ ಸ್ವಾತಂತ್ರ್ಯ ನಮ್ಮ ಯಕ್ಷಗಾನ ರಂಗದಲ್ಲಿದೆ. ಈ ಸ್ವಾತಂತ್ರ್ಯ ಇಂದು ಸ್ವೇಚ್ಛೆಯಾಗಿ ಮಾರ್ಪಟ್ಟಿದೆಯೇ? ಹೌದೂ ಎಂದೇ ಅನ್ನಿಸುತ್ತಿದೆ. ಹಿಮ್ಮೇಳವು ಸಂಗೀತ ಕಛೇರಿಯೋ, ವಾದ್ಯಗೋಷ್ಠಿಯೋ ಆದರೆ ಮುಮ್ಮೇಳ ಭರತನಾಟ್ಯ, ಸರ್ಕಸ್, ದೊಂಬರಾಟಗಳ ಮಿಶ್ರಣವಾಗಿದೆ.

ಎಲ್ಲಾ ವಿಭಾಗಗಳಲ್ಲಿಯೂ ಅನುಸರಣೆಯ ಮಾರ್ಗವಿಲ್ಲದೇ ಅನುಕರಣೆಯೇ ಕಾಣಿಸುತ್ತಿದೆ. ಇದಕ್ಕೆ ಕಾರಣ ಕಲಾವಿದರ ಅಧ್ಯಯನದ ಕೊರತೆಯಲ್ಲವೇ? ಇಡೀ ಪದ್ಯಕ್ಕೆ ಅಭಿನಯಿಸಬೇಕಾದಲ್ಲಿ ಕೇವಲ ಒಂದೋ, ಎರಡೋ ಪದಗಳಿಗೆ ಅಭಿನಯ, ಇಡೀ ಪದ್ಯದ ಅರ್ಥ ಹೇಳಬೇಕಾದಲ್ಲಿ ಕೇವಲ ರಂಜನೆಗೆ ಬೇಕಾದ ಎರಡು ಮಾತು. ಹೀಗೇ ಅನೇಕ ಸಂಗತಿಗಳು ಕಾಣಿಸುತ್ತವೆ. ಇವುಗಳನ್ನು ಕಲಾವಿದರ ಗಮನಕ್ಕೆ ತಂದಾಗ ಬಂದ ಪ್ರತಿಕ್ರಿಯೆಗಳು; ಪ್ರೇಕ್ಷಕರು ಒಪ್ಪಿದ್ದಾರೆ, ನಿಮ್ಮದೆಂತಾ? ನಾವು ಮಾಡುವುದು ಪ್ರೇಕ್ಷಕರಿಗಾಗಿ ಎನ್ನುವುದೇ ಆಗಿದೆ. ಇನ್ನೂ ಮುಂದುವರಿದು ಮೇಳದ ಯಜಮಾನರಿಗಾಗಿ ಅನ್ನುವವರೂ ಇದ್ದಾರೆ. ಪ್ರೇಕ್ಷಕರ ಅಭಿಪ್ರಾಯ ಕೇಳಿದ್ರೆ; ಪ್ರದರ್ಶನ ನಡೆಯುವಾಗ ಚಪ್ಪಾಳೆ, ಸಿಳ್ಳೆ ಹಾಕಿದ ನೋಡುಗರೇ ಆಟ ಮುಗಿಸಿ ಹೋಗುವಾಗ ದೂರುತ್ತಾ ಹೋಗುತ್ತಾರೆ. ಬರೀ ಬೋರ್ ಆಯ್ತು ಅಂತಲೋ, ಬರೀ ಎಳುದ್ರೂ ಅಂತಲೋ ಹೇಳುವುದನ್ನು ಗಮನಿಸಬೇಕು.

ಇಷ್ಟರ ನಡುವೆ ನಮ್ಮ ರಂಗ ಪೂರ್ಣಪ್ರಮಾಣದಲ್ಲಿ ಉಳಿದಿದೆಯೇ ಎನ್ನುವ ಪ್ರಶ್ನೆಯೂ ಇದೆ. ನಿತ್ಯವೇಷವಿಲ್ಲ, ಪೀಠಿಕಾ ಸ್ತ್ರೀಪಾತ್ರ, ಒಡ್ಡೋಲಗಕ್ಕೆ ಕಲಾವಿದರಿಲ್ಲ. ಎಲ್ಲರಿಗೂ ಕಾಣಿಸಿಕೊಳ್ಳುವಂತಹಾ ಪಾತ್ರಗಳೇ ಬೇಕು. ತಮಗೆ ಸಿಕ್ಕಿದ ಪಾತ್ರಗಳಲ್ಲಿ ಕಾಣಿಸಿಕೊಳ್ಳಲು ಅನೇಕ ಕಸರತ್ತುಗಳು. ಅಭಿಮನ್ಯುವಿನ ಕುಣಿತವೂ, ಕೃಷ್ಣನ ಕುಣಿತವೂ, ಕರ್ಣನ ಕುಣಿತವೂ ಒಂದೇ. ಕುಂತಿಯ ದುಃಖ, ಸೀತೆಯ ದುಃಖ, ದ್ರೌಪದಿಯ ಅಳಲು ಎಲ್ಲವೂ ಒಂದೇ. ಇನ್ನೊಂದು ದುರಂತವೆಂದರೆ, ಯಾರಾದ್ರು ಒಬ್ಬ ಕಲಾವಿದನ ಒಂದು ಮಾತು, ಅಭಿನಯ ಪ್ರಚಾರಕ್ಕೆ ಬಂದು ಜನಪ್ರಿಯವಾದರೇ, ಉಳಿದೆಲ್ಲರದ್ದೂ ಅದೇ ಮಾತು, ಅದೇ ಅಭಿನಯ. ಹಾಗಾದರೆ ಸ್ವಂತ ಶೈಲಿಯ ಸ್ಥಾಪನೆಗೆ ಕಲಾವಿದರ ಪರಿಶ್ರಮ ಏನೂ ಇಲ್ಲವೇ?

ಇತ್ತೀಚಿಗೆ ಒಂದು ಪ್ರದರ್ಶನ ನೋಡ್ತಿದ್ದೆ. ಋಷಿಕುಮಾರನ ಜೊತೆ ಒಂದು ಹಾಸ್ಯಪಾತ್ರವಿತ್ತು. (ಕೀಚಕನ ಜೊತೆಯ ವಿಜಯ ಇದ್ದ ಹಾಗೆ.) ಆಶ್ರಮವಾಸಿ ತಾನು ಎನ್ನುವ ಕಲ್ಪನೆಯೂ ಇಲ್ಲದೇ, ತೀರಾ ಆಧುನಿಕ ಉದಾಹರಣೆಗಳು, ಕಥೆಗಳ ಮೂಲಕ ಆ ಹಾಸ್ಯಪಾತ್ರದ ನಿರ್ವಹಣೆ ಇತ್ತು. ಇಲ್ಲಿ ಕೆಲವೊಂದು ಪಾತ್ರಗಳ ಅಗತ್ಯ, ಹಾಗೂ ಪ್ರಸ್ತುತಿಯ ಬಗ್ಗೆ ಕಲಾವಿದರು ಗಂಭೀರವಾಗಿ ಯೋಚಿಸಬೇಕಿದೆ. ಈ ಬಗ್ಗೆ ಮುಂದಕ್ಕೆ ಬರೆಯುವ ಹಂಬಲವಿದೆ. ಮತ್ತೊಮ್ಮೆ ಎಲ್ಲರಿಗೂ ಗೌರೀ–ಗಣೇಶ ಹಬ್ಬದ ಶುಭಾಶಯಗಳು. – **ಅಜಿತ್ ಕಾರಂತ ಟಿ.ವಿ.**

## ಸ್ವಾತಂತ್ರ್ಯಪೂರ್ವ–ಸ್ವಾತಂತ್ರ್ಯೋತ್ತರದ ಯಕ್ಷಗಾನ

ಯಕ್ಷಗಾನದ ಬೆಳವಣಿಗೆ ನಿಂತ ನೀರಲ್ಲ, ಸದಾ ಒಂದಿಲ್ಲೊಂದು ಹೊಸತನದೊಂದಿಗೆ ಕಲಾಪ್ರಪಂಚಕ್ಕೆ ತನ್ನನ್ನು ತಾನು ತೆರೆದುಕೊಂಡು ಕಲಾ ಪ್ರಪಂಚಕ್ಕೆ ಕಲಾವಿದರನ್ನು ನೀಡುತ್ತಾ ಕಲೆಯನ್ನು ಬಾನೆತ್ತರಕ್ಕೆ ಬೆಳೆಸುತ್ತಾ ಬಂದಿದೆ. ಯಕ್ಷಗಾನ ಆರಂಭದಲ್ಲಿ ಒಂದು ಆರಾಧನಾ ಕಲೆಯಾಗಿ ಕಾಣಿಸಿಕೊಂಡಿದ್ದರೂ ಸ್ವಾತಂತ್ರ್ಯೋತ್ತರದಲ್ಲಿ ಕಾಲಕ್ರಮೇಣ ಅದನ್ನೇ ಕಲೋಪಾಸಕರು ಆರಾಧಿಸುವ ಮಟ್ಟಿಗೆ ಕಲೆಯೊಂದು ಬೆಳೆಯಿತು, ಬೆಳೆಯುತ್ತಿದೆ ಎಂದರೆ ಅದು ಆ ಕಲೆಯ ಯಶಸ್ಸಲ್ಲದೇ ಮತ್ತೇನೂ ಅಲ್ಲ.

ಸ್ವಾತಂತ್ರ್ಯ ಪೂರ್ವದಲ್ಲಿ ಯಕ್ಷಗಾನ ಪ್ರಚಲಿತದಲ್ಲಿದ್ದರೂ ಸ್ವಾತಂತ್ರ್ಯೋತ್ತರದಲ್ಲಿ ಅದರ ಕೃಷಿ ಬಹಳ ವೇಗವಾಗಿ ಬೆಳೆಯಿತು ಎನ್ನುವುದರಲ್ಲಿ ಸಂಶಯವಿಲ್ಲ. ಅಂದು ಸಾಮಾಜಿಕ ಕಟ್ಟುಪಾಡುಗಳಿಂದಲಾಗಿ ಮೇಳಗಳಲ್ಲಿ ದುಡಿಯುವ ವರ್ಗಗಳೂ ಧಾರ್ಮಿಕ ಚೌಕಟ್ಟಿಗೊಳಪಟ್ಟಿದ್ದವು. ಮೇಲ್ವರ್ಗದವರು ಕಾಣಿಸಿಕೊಳ್ಳುತ್ತಿದ್ದದ್ದು ಕಡಿಮೆ. ಬಯಲಾಟದ ಸ್ವರೂಪ ಮಾತ್ರ ಇತ್ತು. ದೇವಾಲಯಗಳ ಹೊರಬಯಲುಗಳಲ್ಲಿ ಯಕ್ಷಗಾನಗಳು ಪ್ರದರ್ಶನಗೊಳ್ಳುತ್ತಿದ್ದವು. ಸಮಾಜದ ಮಡಿವಂತಿಕೆಯಿಂದಾಗಿ ಬಯಲಾಟವನ್ನು ನೋಡುವುದೇ ಮಹಾಪಾಪ ಎಂಬ ಮನೋಭಾವ ಕೆಲವು ವರ್ಗಗಳಲ್ಲಿದ್ದ ಕಾಲವದು. ಯಕ್ಷಗಾನ ಒಂದು ಸಾಂಸ್ಕೃತಿಕ ಮನೋರಂಜನೆಯ ಅಂಶವಾದರೂ ಮಡಿವಂತಿಕೆ ಅದನ್ನು ಬಿಟ್ಟದ್ದಿಲ್ಲ. ಯಕ್ಷಗಾನ ಕಲಾವಿದರಿಗೆ ಸಮಾಜದಲ್ಲಿ ಗೌರವದ ವಿಚಾರವೇ ಇಲ್ಲ. ಭೋಜನದಲ್ಲೂ ಸಮಾನತೆಯಿಲ್ಲ. ಸಮಾಜದಲ್ಲಿ ದೊಡ್ಡವರು ಎನಿಸಿಕೊಂಡವರಿಂದ ತಾತ್ಸಾರದ ಮಾತುಗಳು ಬಿಟ್ಟರೆ ಬೇರಾವ ವಿಶೇಷ ಸಂಭಾವನೆಯೋ, ಮರ್ಯಾದೆಯೋ ಸಿಗುತ್ತಿರಲಿಲ್ಲ, ಅದನ್ನು ಬಯಸುವಂತೆಯೂ ಇರಲಿಲ್ಲ.

ಸಂಚಾರ ವ್ಯವಸ್ಥೆ ಇಲ್ಲ. ಕಾಲ್ನಡಿಗೆಯೇ ಗತಿ. ವಸತಿ ಮೊದಲೇ ಇಲ್ಲ. ಮೇಳಗಳ ಸರಕಿನ ಸಾಗಟವೂ ತಲೆಯ ಮೇಲೆ ಹೊತ್ತುಕೊಂಡೇ ಆಗಬೇಕಿತ್ತು. ಚೌಕಿಗೆ ಬಂದರೆ ಹಿರಿಯ ಕಲಾವಿದ–ಕಿರಿಯ ಕಲಾವಿದ ಎನ್ನುವ ಜವಾಬ್ದಾರಿಗಳು, ಕ್ರಮಗಳು ಬೇರೆಯೇ. ಕಿರಿಯನೆಂದರೆ ಆಳಿಗೆ ಸಮಾನ. ತಗ್ಗಿ–ಬಗ್ಗಿ ನಡೆಯಬೇಕಾದ ಅನಿವಾರ್ಯತೆ. ಆದರೆ ಅದೆಲ್ಲವನ್ನೂ ಕಿರಿಯ ಕಲಾವಿದರೆಲ್ಲರೂ ಗೌರವದಿಂದಲೇ ಮಾಡಿ, ಇಂದು ಅನುಭವೀ ಕಲಾವಿದರಾಗಿ ಜನಮಾನಸದಲ್ಲಿ ನೆಲೆಯಾದವರಿದ್ದಾರೆ. ರಂಗಸ್ಥಳದ ವಿಚಾರಕ್ಕೆ ಬಂದರೆ, ಹಿಮ್ಮೇಳದವರಿಗೆ ಆರಂಭದಲ್ಲಿ ಕುಳಿತುಕೊಳ್ಳುವುದಕ್ಕೆ ವ್ಯವಸ್ಥೆ ಇರಲಿಲ್ಲ. ಆ ಕ್ರಮವೂ ಇರಲಿಲ್ಲವೆನ್ನಿ. ಇಡೀ ಪ್ರದರ್ಶನದಲ್ಲಿ ನಿಂತುಕೊಂಡೇ ಇರಬೇಕಾಗಿತ್ತು. ರಂಗಸ್ಥಳ, ವೇಷಭೂಷಣಗಳ ವಿನ್ಯಾಸ ಬೇರೆಯದಿತ್ತು. ಆದರೆ ಈ ನಿರ್ಬಂಧಗಳು, ಕ್ರಮಗಳು ಸ್ವಾತಂತ್ರೋತ್ತರದಲ್ಲಿ ಒಮ್ಮೆಗೇ ಅಲ್ಲದಿದ್ದರೂ ಕಾಲಕ್ರಮೇಣ ಕಡಿಮೆಯಾಗಿ, ಈಗ ಯಕ್ಷಗಾನವನ್ನು, ಕಲಾವಿದನನ್ನು ದೇವರೆನ್ನುವ ಮಟ್ಟಿಗೆ ಗೌರವಿಸುವ ಕಾಲ ಬಂದದ್ದು ಸಂತೋಷದಾಯಕ. ಕೆಲವೊಮ್ಮೆ ಅದೂ ಕೂಡ ಅತಿಯಾಗುವುದುಂಟು. ಒಳ್ಳೆಯ ಬೆಳವಣಿಗೆಗಳು ಮಾತ್ರವೇ ಅಭಿನಂದನಾರ್ಹ. ಆದರೆ ಕೆಲವೊಂದು ವಿಚಾರಗಳು ಯಕ್ಷಗಾನ ಕ್ಷೇತ್ರದಲ್ಲಿ ಅತಿಯೆನಿಸಿ ಕಿರಿಕಿರಿಯಾಗುತ್ತದೆ. ಸ್ವಾತಂತ್ರ್ಯಪೂರ್ವದಲ್ಲಿ ಯಕ್ಷಗಾನದ ಮೇಳಗಳು ಬೆರಳೆಣಿಕೆಯಷ್ಟು ಮಾತ್ರವೇ ಇದ್ದದ್ದು. ಯಕ್ಷಗಾನದ ಮಾಧ್ಯಮವೂ ಕನ್ನಡ ಮಾತ್ರವಿತ್ತು. ಸ್ವಾತಂತ್ರ್ಯೋತ್ತರದಲ್ಲಿ ಸುಶಿಕ್ಷಿತರು ಹೆಚ್ಚಾದರು. ಭಾಷೆಯ ಜ್ಞಾನ ಹೆಚ್ಚಾಯಿತು. ಕನ್ನಡ ಮಾತ್ರವಲ್ಲದೇ, ಆಂಗ್ಲ, ಸಂಸ್ಕೃತ, ಹಿಂದಿ, ತುಳು, ಅಷ್ಟೇ ಮುಂತಾದ ಭಾಷೆಗಳಲ್ಲಿ ಯಕ್ಷಗಾನ ಪ್ರದರ್ಶನಗಳಾದವು. ಪ್ರಸಂಗ ರಚನೆಗಳಾದವು. ತುಳುತಿಟ್ಟು ಎಂದು ಗುರುತಿಸುವಷ್ಟರ ಮಟ್ಟಿಗೆ ತುಳು ಮೇಳಗಳು, ಪ್ರದರ್ಶನಗಳು ಹೆಚ್ಚಾದವು. ತಾಳಮದ್ದಳೆ ಕ್ಷೇತ್ರ ಬಹಳ ವೇಗವಾಗಿ ಸಮೃದ್ಧವಾಗಿ ಬೆಳೆಯಿತು. ಸ್ಥಳೀಯವಾಗಿ ಪ್ರದರ್ಶನಗೊಳ್ಳುತ್ತಿದ್ದ ಕಲೆ ವಿಶ್ವವ್ಯಾಪಿಯಾಯಿತು. ಕೇವಲ ಯಕ್ಷಗಾನ, ತಾಳಮದ್ದಳೆ ಮಾತ್ರವಲ್ಲದೇ ಯಕ್ಷಗಾನ ಬ್ಯಾಲೆ, ಗಾನವೈಭವ, ನಾಟ್ಯವೈಭವ, ಹಾಸ್ಯವೈಭವಗಳಂತಹ ಕೆಲವು ರೂಪಾಂತರಗಳನ್ನು ಹೊಂದುವುದರ ಮೂಲಕ ಇನ್ನಷ್ಟು ಜನರನ್ನು ತಲುಪಿತು. ಯಕ್ಷಗಾನ ಇನ್ನೇನು ಇಳಿಯುತ್ತದೆ ಎನ್ನುವಾಗ ಯುವಜನತೆ ವಿಶೇಷವಾಗಿ ಮತ್ತೆ ಯಕ್ಷಗಾನವನ್ನು ಬಾಚಿ ತಬ್ಬಿಕೊಂಡು ಬೆಳೆಯಿಸಿತು. ಹೀಗೆ ತನ್ನತನವನ್ನು ಉಳಿಸಿಕೊಂಡು, ಆಧುನಿಕ ಮಾಧ್ಯಮವನ್ನು ಬಳಸಿಕೊಂಡು, ಪ್ರಪಂಚದಾದ್ಯಂತ ಯಕ್ಷಗಾನ ಬೆಳೆಯಲಿ, ನಮ್ಮತ್ನವನ್ನು ಬೆಳಗಲಿ ಎಂದು ಆಶಿಸೋಣ. **ಲೇಖಕರು – ಸಾಯಿಸುಮಾ ಎಂ. ನಾವಡ, ಕಾರಿಂಜ**

***ನಿಮಗಿದು ಗೊತ್ತೇ? – ರಂಗಸ್ಥಳದ ಮೋಹಿನಿ ಎಂದೇ ಖ್ಯಾತರಾಗಿದ್ದ ಕೆ. ಈಶ್ವರ ಭಟ್ ರವರು ಮೊದಲು ಸೇವೆ ಸಲ್ಲಿಸಿದ ಮೇಳ ಮುಲ್ಕಿ ಮೇಳ. ಅಂದು ಈ ಮೇಳವನ್ನು ಅವರ ಬಂಧುಗಳಾಗಿದ್ದ ಹಾಸ್ಯಗಾರ ಪೆರೋಡಿ ನಾರಾಯಣ ಭಟ್ ರವರು ನಡೆಸುತ್ತಿದ್ದರು***

## ರಾಷ್ಟ್ರ ಪ್ರೇಮಕ್ಕೆ ಯಕ್ಷಗಾನ ಪ್ರಸಂಗ ಸಾಹಿತ್ಯದ ಕೊಡುಗೆ

***ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ದೇಶಭಕ್ತರ ಕಥಾನಕವನ್ನು ಯಕ್ಷರಂಗಕ್ಕೆ ತಂದವರಲ್ಲಿ, ಹಿಂದಿನ "ನವಭಾರತ" ಪತ್ರಿಕೆಯ ಸಂಪಾದಕರಾಗಿದ್ದ ಎಂ.ವಿ.ಹೆಗಡೆಯವರ ಕಾಣಿಕೆ ಮಹತ್ವದ್ದು . ಎಂ.ವಿ .ಹೆಗಡೆಯವರು ಸುಮಾರು ೫೦ ವರ್ಷಗಳ ಹಿಂದೆಯೇ ರಚಿಸಿದ್ದ "ಸ್ವರಾಜ್ಯ ವಿಜಯ" ಹಾಗೂ "ಹೈದರಾಬಾದ್ ವಿಜಯ" ಎಂಬ ಎರಡು ಪ್ರಸಂಗಗಳನ್ನು ತಾಳಮದ್ದಳೆ ರೂಪದಲ್ಲಿ ಮೊದಲ ಬಾರಿಗೆ ಪ್ರದರ್ಶನ ಕಂಡಿತ್ತು***



**ಎಂ.ಶಾಂತರಾಮ ಕುಡ್ವ**



**ಬಾಲ ಭಗತ್ ಸಿಂಹನಾಗಿ ಮಾ.ಹೃದನ್ ಪಟ್ಲ**

ಈ ಸಾಲಿನ ಭಾರತದ ಸ್ವಾತಂತ್ರ್ಯೋತ್ಸವ ಅಮೃತ ವರ್ಷವನ್ನು ಕಂಡಿದೆ. ಈ ಸಂದರ್ಭದಲ್ಲಿ ಯಕ್ಷಗಾನಕ್ಕೆ ಹಾಗೂ ಸ್ವಾತಂತ್ರ್ಯೋತ್ಸವದ ಬಗ್ಗೆ ಇರುವ ನಂಟನ್ನು ಹೇಳಲೇಬೇಕಾಗಿದೆ .

ಭಾರತದ ಸ್ವಾತಂತ್ರ್ಯಕ್ಕಾಗಿ ಅದೆಷ್ಟೋ ಲಕ್ಷಾಂತರ ದೇಶಪ್ರೇಮಿಗಳು ತಮ್ಮ ಬಲಿದಾನ ಮಾಡಿದ್ದಾರೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಲ್ಲಿ ಯಕ್ಷಗಾನ ಕಲಾವಿದರೂ ಇದ್ದಾರೆ . ಹಿಂದಿನ ಸುಪ್ರಸಿದ್ಧ ಯಕ್ಷಗಾನ ಕಲಾವಿದರಾಗಿದ್ದ ನಾರಾಯಣ ಕಿಲ್ಲೆ, ಕವಿಭೂಷಣ ವೆಂಕಪ್ಪ ಶೆಟ್ಟಿಯವರು, ಶಂಕರನಾರಾಯಣ ಸಾಮಗರು, ಡಾ.ಶೇಣಿ ಗೋಪಾಲಕೃಷ್ಣ ಭಟ್ಟರು, ಪೆರ್ಲ ಕೃಷ್ಣ ಪಂಡಿತರು ಹೀಗೆ ಈ ಯಾದಿ ಬೆಳೆಯುತ್ತಿದೆ. ಕೇರಳ ರಾಜ್ಯದ ಅಸಂಖ್ಯಾತ ಯಕ್ಷಗಾನ ಕಲಾವಿದರೂ ಈ ಯಾದಿಯಲ್ಲಿ ಇದ್ದಾರೆ. ಸ್ವಾತಂತ್ರ್ಯೋತ್ಸವದ ಈಗಿನ ಅಮೃತೋತ್ಸವದ ಸಂದರ್ಭದಲ್ಲಿ , ಇಂದು ನಮ್ಮನ್ನು ಅಗಲಿದ ಆ ಮಹಾ ಚೇತನಗಳನ್ನು ಸ್ಮರಿಸಲೇಬೇಕು.

ಯಕ್ಷಗಾನ ಕ್ಷೇತ್ರವು, ಅಮೃತ ಸ್ವಾತಂತ್ರ್ಯೋತ್ಸವದ ಈ ಸಂದರ್ಭದಲ್ಲಿ ಹಲವಾರು ಐತಿಹಾಸಿಕ ದಾಖಲೆ ಮಾಡಿದೆ. ಯಕ್ಷಗಾನಕ್ಕೂ ಸ್ವಾತಂತ್ರೋತ್ಸವಕ್ಕೂ ಅವಿನಾಭಾವ ಸಂಬಂಧವಿದೆ. ದೇಶಪ್ರೇಮಿಗಳ, ಕ್ರಾಂತಿವೀರರ ಕಥಾನಕಗಳನ್ನು ಯಕ್ಷಗಾನವು, ಕಾಲಕಾಲಕ್ಕೆ ಸಮರ್ಥವಾಗಿ ಪ್ರದರ್ಶಿಸಿದೆ. ಕಳೆದ ವರ್ಷ ೨೦೨೧ರಲ್ಲಿ ಮಂಗಳೂರಿನಲ್ಲಿ "ಸಂಸ್ಕಾರ ಭಾರತಿ"ಯ ಕಾರ್ಯಕ್ರಮವೊಂದರಲ್ಲಿ , ಸುಪ್ರಸಿದ್ಧ ಭಾಗವತರಾದ ಪಟ್ಲ ಸತೀಶ್ ಶೆಟ್ಟರ ಸಾರಥ್ಯದಲ್ಲಿ, ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗರ ಕುರಿತಾದ "ಕ್ರಾಂತಿ ಸೂರ್ಯ ಭಗತ ಸಿಂಹ " ಎಂಬ ಕಥಾನಕವು ಯಕ್ಷಗಾನೀಯ ಶೈಲಿಯಲ್ಲಿ ಪ್ರದರ್ಶನಗೊಂಡಿತ್ತು . ಭಗತ್ ಸಿಂಗ್ ರವರು ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಅಪ್ಪಟ ದೇಶಪ್ರೇಮಿಯಾಗಿ ಹೋರಾಡಿದವರು. ನಿರ್ಭೀತ ವ್ಯಕ್ತಿತ್ವದ, ಸಿಂಹದ ಮರಿಯಂತೆ ಯುವ ಜನತೆಯಲ್ಲಿ ದೇಶಪ್ರೇಮದ ಕಿಚ್ಚನ್ನು ಹೊತ್ತಿಸಿದವರು . ಬ್ರಿಟಿಷ್ ಸರಕಾರದಿಂದ ಗಲ್ಲುಶಿಕ್ಷೆ ವಿಧಿಸಲ್ಪಟ್ಟು "ನಿನ್ನ ಕೊನೆಯ ಆಸೆ ಏನು" ಎಂದಾಗ "ನನ್ನನ್ನು ಯುದ್ಧ ಖೈದಿಯನ್ನಾಗಿ ಪರಿಗಣಿಸಿ , ಗುಂಡಿಟ್ಟು ಕೊಲ್ಲಿ , ಗಲ್ಲು ಶಿಕ್ಷೆ ಬೇಡ " ಎಂದು ಹೇಳಿದ ಧೈರ್ಯಶಾಲಿ ವ್ಯಕ್ತಿತ್ವ ಭಗತ್ ಸಿಂಗ್ ರದ್ದು .ಆದರೂ , ಸುಖದೇವ್ , ರಾಜಗುರು ವಿನೊಂದಿಗೆ " ಭಾರತ್ ಮಾತಾ ಕೀ ಜೈ " ಎನ್ನತ್ತಲೇ ನೇಣುಗಂಭ ಏರಿದ್ದರು. ತೆಂಕುತಿಟ್ಟಿನ ಸುಪ್ರಸಿದ್ಧ ಕಲಾವಿದರ ಸಮಾಗಮದಲ್ಲಿ ಈ ಪ್ರದರ್ಶನ ಮಂಗಳೂರಿನ ಪುರಭವನದಲ್ಲಿ ಪ್ರದರ್ಶನವಾಗಿ ಜನ ಮೆಚ್ಚುಗೆ ಗಳಿಸಿತ್ತು. ಅಂದು ಪಟ್ಲರ ಸುಪುತ್ರರಾದ ಹೃದನ್ ಶೆಟ್ಟಿ ಬಾಲ ಭಗತ್ ಸಿಂಗ್ ನ ಪಾತ್ರದಲ್ಲಿ ಕಾಣಿಸಿ ಮೆಚ್ಚುಗೆ ಗಳಿಸಿದ್ದರು. ನಂತರದಲ್ಲಿ ಇದೇ ಪ್ರದರ್ಶನ ಸುಳ್ಯದಲ್ಲೂ ಜರುಗಿತ್ತು . ಪ್ರಸಾದ್ ಕುಮಾರ್ ಮೊಗೆಬೆಟ್ಟುರವರು ರಚಿಸಿದ ಈ ಪ್ರಸಂಗವು ಜನಪ್ರಿಯತೆಯನ್ನು ಗಳಿಸಲು ಯಶಸ್ವಿಯಾಗಿತ್ತು .ಯಕ್ಷಗಾನೀಯ ಶೈಲಿಯ ವೇಷಭೂಷಣ, ಸಂಭಾಷಣೆಯು ಗಮನ ಸೆಳೆದಿತ್ತು . ಈ ಪ್ರಸಂಗವು ಅದರ ಮೊದಲೇ ೨೦೨೦ ರಲ್ಲಿ ಬಡಗು ತಿಟ್ಟಿನಲ್ಲೂ ಪ್ರದರ್ಶನವಾಗಿತ್ತು . ಮೊಗೆಬೆಟ್ಟುರವರು ಈ ಪ್ರಸಂಗದಲ್ಲಿ ಉತ್ತಮ ಸಾಹಿತ್ಯವನ್ನೇ ರಚಿಸಿದ್ದರು. ಈ ಎಲ್ಲಾ ಪದ್ಯಗಳು ಪಟ್ಲರ ಕಂಠದಲ್ಲಿ ಅತ್ಯುತ್ತಮವಾಗಿ ಮೂಡಿ ಬಂದಿತ್ತು .



**ಉಡುಪಿಯಲ್ಲಿ ಜರುಗಿದ "ಸ್ವರಾಜ್ಯ ವಿಜಯ" ತಾಳಮದ್ದಳೆಯ ಒಂದು ದೃಶ್ಯ**

ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ದೇಶಭಕ್ತರ ಕಥಾನಕವನ್ನು ಯಕ್ಷರಂಗಕ್ಕೆ ತಂದವರಲ್ಲಿ, ಹಿಂದಿನ "ನವಭಾರತ" ಪತ್ರಿಕೆಯ ಸಂಪಾದಕರಾಗಿದ್ದ ಎಂ.ವಿ.ಹೆಗಡೆಯವರ ಕಾಣಿಕೆ ಮಹತ್ವದ್ದು . ಎಂ.ವಿ .ಹೆಗಡೆಯವರು ಸುಮಾರು ೫೦ ವರ್ಷಗಳ ಹಿಂದೆಯೇ ರಚಿಸಿದ್ದ "ಸ್ವರಾಜ್ಯ ವಿಜಯ" ಹಾಗೂ "ಹೈದರಾಬಾದ್ ವಿಜಯ" ಎಂಬ ಎರಡು ಪ್ರಸಂಗಗಳನ್ನು ಈ ಸ್ವಾತಂತ್ರ್ಯೋತ್ಸವದ ಅಮೃತೋತ್ಸವದ ಸಂದರ್ಭದಲ್ಲಿ ಉಲ್ಲೇಖಿಸಲೇಬೇಕು . ಹರಿಕಥೆಯಲ್ಲಿ ಈ ಕಥಾನಕಗಳು ಪ್ರದರ್ಶಿಸಲ್ಪಟ್ಟಿದೆ ಎಂಬ ಅಭಿಪ್ರಾಯ ಇದೆ . ಆದರೆ , ಯಕ್ಷಗಾನ ತಾಳಮದ್ದಳೆ ಮೂಲಕ ಇದನ್ನು ಜನಪ್ರಿಯಗೊಳಿಸಿದವರು ಉಡುಪಿಯ ಯಕ್ಷಗಾನ ಕಲಾಪೋಷಕರಾದ ಸುಧಾಕರ ಆಚಾರ್ಯರು. ೨೦೧೬ ರಲ್ಲಿ ಸುಧಾಕರ ಆಚಾರ್ಯರು "ಸ್ವರಾಜ್ಯ ವಿಜಯ" ಎಂಬ ಈ ಪ್ರಸಂಗವನ್ನು , ಸುಪ್ರಸಿದ್ಧ ಕಲಾವಿದರ ಕೂಡುವಿಕೆಯಲ್ಲಿ , ತಾಳಮದ್ದಳೆ ಮೂಲಕ ಪ್ರಚುರಗೊಳಿಸಿದ್ದರು. ನಂತರ ೨೦೧೮ರಲ್ಲಿ ಮೂಡುಬಿದಿರೆಯ ಡಾ.ಮೋಹನ ಆಳ್ವರು, ಇದೇ ಪ್ರಸಂಗವನ್ನು ಆಳ್ವಾಸ್ ಕಾಲೇಜಿನಲ್ಲಿ ಪ್ರದರ್ಶಿಸಿದ್ದರು. ಗಾಂಧಿ, ನೆಹರು ಮುಂತಾದ ಪಾತ್ರಗಳು "ಸ್ವರಾಜ್ಯ ವಿಜಯ" ಪ್ರಸಂಗದಲ್ಲಿತ್ತು .ಅಂದಿನ ಕೂಟದಲ್ಲಿ ಎಲ್ಲಾ ಕಲಾವಿದರೂ ಗಾಂಧಿ ಟೋಪಿ ಧರಿಸಿಯೇ ವೇದಿಕೆ ಏರಿದ್ದು ಉಲ್ಲೇಖನೀಯ. ೨೦೧೭ ರಲ್ಲಿ ಸುಧಾಕರ ಆಚಾರ್ಯರು ಉಡುಪಿಯಲ್ಲಿ "ಹೈದರಾಬಾದ್ ವಿಜಯ" ಪ್ರಸಂಗವನ್ನೂ ಪ್ರದರ್ಶಿಸಿದ್ದರು . ಈ ವರ್ಷವೂ ಆಗಸ್ಟ್ ೩೧ರಂದು, ದೇಶಭಕ್ತಿಯ ಕಥಾನಕವುಳ್ಳ "ಕಾಶ್ಮೀರ ವಿಜಯ" ಪ್ರದರ್ಶನಗೊಳ್ಳಲಿದೆ. ಸ್ವಾತಂತ್ರ್ಯ ಅಮೃತೋತ್ಸವದ ಪೂರ್ವಭಾವಿಯಾಗಿ ೨೦೨೦ರಂದು, ಅಪ್ರತಿಮ ದೇಶಭಕ್ತ, ಭಾರತದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಜೀವನ ಕಥೆಯನ್ನುಳ್ಳ "ನರೇಂದ್ರ ವಿಜಯ" ಎಂಬ ಪ್ರಸಂಗವು ಪ್ರದರ್ಶನಗೊಂಡಿತ್ತು. ಶ್ರೀಮತಿ ಜ್ಯೋತಿಲಕ್ಷ್ಮಿ ಶಾಸ್ತ್ರಿಯವರು ರಚಿಸಿದ ಈ ಪ್ರಸಂಗಕ್ಕೆ ಸುಪ್ರಸಿದ್ಧ ಯಕ್ಷಗಾನ ಕಲಾವಿದರಾಗಿದ್ದ ಎಂ.ಕೆ.ರಮೇಶ ಆಚಾರ್ಯರು ಪದ್ಯ ರಚಿಸಿದ್ದರು . ಈ ಪ್ರಸಂಗವು ಹಲವಾರು ಪ್ರದರ್ಶನ ಕಂಡಿತ್ತು . ಈ ವರ್ಷದಲ್ಲಿ ಹೆಚ್ಚಿನ ಎಲ್ಲಾ ತಾಳಮದ್ದಳೆ ಕೂಟ, ಯಕ್ಷಗಾನ ಪ್ರದರ್ಶನಗಳಲ್ಲಿ "ವಂದೇ ಮಾತರಂ" ರಾಷ್ಟ್ರಭಕ್ತಿಯ ಗೀತೆಯು ಭಾಗವತರಿಂದ ಸುಶ್ರಾವ್ಯವಾಗಿ ಹಾಡಲ್ಪಟ್ಟಿತ್ತು. ಪಶ್ಚಿಮ ಬಂಗಾಳದ ಕವಿ ಶ್ರೇಷ್ಠರಾದ ಬಂಕಿಮ ಚಂದ್ರ ಚಟರ್ಜಿಯವರಿಂದ ರಚಿಸಲ್ಪಟ್ಟ ಈ ಗೀತೆಯು ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ದೇಶಭಕ್ತರಿಗೆ ಸ್ಫೂರ್ತಿ ಹುಟ್ಟಿಸಿದ ಗೀತೆ. "ವಂದೇ ಮಾತರಂ" ಈಗಲೂ ದೇಶಭಕ್ತರಿಗೆ ಉತ್ತೇಜನ ನೀಡುವಂತಹುದು. ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಕಾಲದಲ್ಲಿ ಅಂದರೆ, ೨೫ ವರ್ಷಗಳ ಹಿಂದೆ ಮೂಡಬಿದಿರೆಯ ಕಾಳಿಕಾಂಬ ದೇವಸ್ಥಾನದಲ್ಲಿ ಜರುಗಿದ ತಾಳಮದ್ದಳೆ ಕೂಟದಲ್ಲಿ ಸುಪ್ರಸಿದ್ಧ ಭಾಗವತರಾದ ಪುತ್ತಿಗೆ ರಘುರಾಮ ಹೊಳ್ಳರು "ವಂದೇ ಮಾತರಂ" ಗೀತೆಯನ್ನು ಯಕ್ಷಗಾನ ಶೈಲಿಯಲ್ಲಿ ಹಾಡಿದ್ದೇ ಯಕ್ಷಗಾನ ರಂಗದಲ್ಲಿ ಪ್ರಥಮ ಇರಬಹುದು ಎಂದು ಅನಿಸುತ್ತದೆ. – ***ಎಂ.ಶಾಂತರಾಮ ಕುಡ್ವ***

## ಬಿಟ್ಟ ಮೈ ವೇಷದ ತಾಂತ್ರಿಕ ಸಮಸ್ಯೆಗಳು



ರವಿ ಮಡೋಡಿ

ಪ್ರದರ್ಶನ ಕಲೆಯಾದ ಯಕ್ಷಗಾನ ಈ ಒಂದು ಶತಮಾನದಲ್ಲಿ ಸಾಕಷ್ಟು ಸ್ಥಿತ್ಯಂತರಗೊಂಡಿದೆ. ಇಲ್ಲಿನ ಆಹಾರ್ಯ, ನೃತ್ಯ ಕ್ರಮ, ಭಾಗವತಿಕೆ, ಅಭಿನಯ, ಅರ್ಥಗಾರಿಕೆ ಹೀಗೆ ಪ್ರತಿ ವಿಭಾಗವು ಕೂಡ ಕಾಲ ಮತ್ತು ಅನ್ಯ ಕಲೆಗಳ ಪ್ರಭಾವದಿಂದ ತನ್ನ ಮೂಲ ಸ್ವರೂಪದಿಂದ ಬದಲಾವಣೆಗೊಂಡಿದ್ದನ್ನು ಹಿರಿಯ ಕಲಾವಿದರೂ, ವಿದ್ವಾಂಸರು ಹಾಗೂ ಪ್ರೇಕ್ಷಕರೂ ಒಪ್ಪಿಕೊಳ್ಳುತ್ತಾರೆ. ಇಂದಿನ ಕಾಲದಲ್ಲಿ ಪ್ರೇಕ್ಷಕರ ಮನಸ್ಥಿತಿ, ವೇಗದ ಜೀವನ, ಇರುವ ಅನುಕೂಲ ಮತ್ತು ಸೌಲಭ್ಯಗಳು ಹೀಗೆ ಇತರ ಕಾರಣಗಳಿಂದ ಸಹ ಕಲೆ ಬದಲಾವಣೆಗೆ ಹೆಚ್ಚು ಹೆಚ್ಚು ಪ್ರಚೋದಿಸುತ್ತದೆ ಎಂಬುದು ವಾಸ್ತವ ಸಂಗತಿಯಾಗಿದೆ. ಕಾಲಿಕವಾದ ಬದಲಾವಣೆ ಬೇಕು. ಕಲೆ ನಿಂತ ನೀರಲ್ಲ. ಹಾಗೆ ಆಗಲೂ ಬಾರದು. ಅದು ಸದಾ ಪ್ರವಹಿಸುವ ನದಿಯಾದಾಗ ಮಾತ್ರ ಕಲೆ ಜೀವಂತವಾಗಿರುತ್ತದೆ ಎನ್ನುವುದಕ್ಕೆ ಯಕ್ಷಗಾನವೂ ಒಂದು ಜ್ವಲಂತ ಉದಾಹರಣೆ. ಯಾವುದನ್ನು ನಾವು ಪರಂಪರೆ ಎನ್ನುತ್ತೇವೆಯೋ ಅದು ಸಹ ಒಂದು ಕಾಲದ ಹೊಸ ಸಾಧ್ಯತೆಯಾಗಿತ್ತು ಎನ್ನುವುದನ್ನು ಎಂದಿಗೂ ಮರೆಯುವ ಹಾಗಿಲ್ಲ. ಇಂತಹ ಸ್ಥಿತಿಯಲ್ಲಿ ಯಕ್ಷಗಾನದ ಆಹಾರ್ಯದಲ್ಲಿನ ಆದ ಒಂದು ಬದಲಾವಣೆ ಎಂದರೆ ಅದುವೇ ಋಷಿ, ಮುನಿ, ಈಶ್ವರ, ವನವಾಸದ ರಾಮ-ಲಕ್ಷ್ಮಣ ಇತ್ಯಾದಿ ಪಾತ್ರಗಳಿಗೆ ಮಾಡುವ 'ಬಿಟ್ಟ ಮೈ ವೇಷ' ವಾಗಿದೆ.



ಸಾಂದರ್ಭಿಕ ಚಿತ್ರ

೨೦-೩೦ ದಶಕದಲ್ಲಿನ ನಾಟಕ, ರಂಗಭೂಮಿಯಲ್ಲಾದ ಕ್ರಾಂತಿಯ ಛಾಯೆ ಯಕ್ಷಗಾನಕ್ಕೂ ಪಸರಿಸಿದ್ದು ಸುಳ್ಳಲ್ಲ. ೧೯೩೦ರಲ್ಲಿ ಪ್ರಥಮವಾಗಿ ಬಡಗಿನಲ್ಲಿ ಸೌಕೂರು ಮೇಳದಲ್ಲಿ ಮೈಬಿಟ್ಟ ವೇಷ ಬಂದಿತ್ತು ಎನ್ನುವುದಾಗಿ ಬಹಳ ಹಿಂದೆ ಹಿರಿಯಡಕ ಗೋಪಾಲರಾಯರನ್ನು ಕೇಳಿದ್ದಾಗ ತಿಳಿಸಿದ್ದರು. ಅಲ್ಲಿಯವರೆಗೆ ದಗಲೆಯಲ್ಲೆ ಯಕ್ಷಗಾನವು ನಡೆಯುತ್ತಿತ್ತು. ಅಂದರೆ ಇದು ಸರಿ ಸುಮಾರು ೧೮೯೦ ಅಥವಾ ಅದಕ್ಕೂ ಹಿಂದಿನವರೆಗೆ ಈ ಪದ್ಧತಿಯು ಆಚರಣೆಯಲ್ಲಿತ್ತು ಎನ್ನುವುದು ಶ್ರುತಗೊಳ್ಳುತ್ತದೆ. ಈ ಕಾರಣಕ್ಕೆ ನಡುತಿಟ್ಟಿನಲ್ಲಿ ಬಿಟ್ಟ ಮೈ ವೇಷದ ಕ್ರಮ ಯಾವ ವೇಷಗಳಿಗೂ ಇರಲಿಲ್ಲ. ಇನ್ನು ಉತ್ತರ ಕನ್ನಡ ಭಾಗದ ಕರ್ಕಿ ಮೇಳದಲ್ಲಿ ಕೆಲವು ಪಾತ್ರಗಳಿಗೆ ಬಿಟ್ಟ ಮೈ ವೇಷ ಮಾಡುವ ಕ್ರಮವಿತ್ತು. ಇದರಲ್ಲಿ ಮುಖ್ಯವಾಗಿ ವಲಲ, ಬಕಾಸುರ ವಧೆಯ ಬಂಡಿ ಭೀಮ ಪಾತ್ರಗಳನ್ನು ಈ ಪಟ್ಟಿಯಲ್ಲಿ ಸೇರಿಸಬಹುದು. ಆದರೆ ಈಶ್ವರ, ಹನುಮಂತ, ಕೃಷ್ಣ, ಋಷಿ-ಮುನಿಗಳು, ವನವಾಸದ ರಾಮ, ಲಕ್ಷ್ಮಣ ಇತ್ಯಾದಿ ಪಾತ್ರಗಳು ಬಿಟ್ಟ ಮೈಯಲ್ಲಿ ಇರುತ್ತಿರಲಿಲ್ಲ. ಕೆಲವು ಪಾತ್ರಗಳಿಗೆ ಮಾತ್ರ ಯಾಕೆ ಮೈ ಬಿಟ್ಟ ವೇಷವನ್ನು ಮಾಡುತ್ತಿದ್ದರು ಎನ್ನುವುದನ್ನು ಊಹಿಸುವಾಗ ಅವು ಬ್ರಾಹ್ಮಣ ಪಾತ್ರಗಳಾಗಿದ್ದವು ಎನ್ನುವುದು ಗಮನಿಸಬೇಕಾದ ಅಂಶವಾಗಿದೆ. ಇಲ್ಲಿ ಲೋಕಧರ್ಮಕ್ಕೆ ಅನುಸರಿಸಿ ಪಾತ್ರಗಳನ್ನು ನಿರ್ವಹಿಸುತ್ತಿದ್ದರು ಎಂದು ಅಂದುಕೊಳ್ಳಬಹುದಾಗಿದೆ. ಕಟ್ಟು ಪಾತ್ರಗಳಾಗಿ ಬಿಟ್ಟು ಮೈಯ ವೇಷ ಮಾಡುವ ಕ್ರಮ ಇಲ್ಲದಿರುವುದು ಇಲ್ಲಿ ಸುಸ್ಪಷ್ಟವಾಗುತ್ತದೆ.

ನಾಟಕದ ಪೌರಾಣಿಕ ಪಾತ್ರಗಳಿಗೆ ಮಾಡುವ ವೇಷಭೂಷಣ, ಪ್ರಸಾದನಗಳನ್ನು ಯಥಾವತ್ತಾಗಿ ಯಕ್ಷಗಾನದ ಕೆಲವು ಪಾತ್ರಗಳಿಗೆ ತಂದಿರುವುದನ್ನು ಕಾಣಬಹುದಾಗಿದೆ. ಯಕ್ಷಗಾನ ಪ್ರಸಂಗಳಲ್ಲಿ ಬರುವ ಜಮದಗ್ನಿ, ದ್ರೋಣ, ಪರಶುರಾಮ, ರಾಮ, ಕೃಷ್ಣ, ಶುಕ್ರ, ನಾರದ, ಯಮ ಇತ್ಯಾದಿ ಪಾತ್ರಗಳು ನಾಟಕದಂತೆ ಬಿಟ್ಟ ಮೈಯಲ್ಲಿ ವೇಷಗಳು ರಂಗಕ್ಕೆ ಬಂದಿರುವುದು, ನಾಟಕದ ಪ್ರಭಾವ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಈ ಬಗ್ಗೆ ಇತಿಹಾಸವನ್ನು ನೋಡುವಾಗ ಬಿಟ್ಟ ಮೈ ವೇಷ ಯಕ್ಷಗಾನ ಪ್ರವೇಶಿಸಿರುವುದನ್ನು ಕೆಲವೊಂದು ದಾಖಲೆಗಳು ದೃಢಪಡಿಸುತ್ತವೆ.



ಸಾಂದರ್ಭಿಕ ಚಿತ್ರ

೧. ಯಕ್ಷಗಾನಕ್ಕೆ ನಾಟಕದ ಆಹಾರ್ಯವನ್ನು ತಂದ ಶ್ರೀ ಕುರಿಯ ವಿಠಲ್ ಶಾಸ್ತ್ರಿಯವರು ೧೯೪೭ರಲ್ಲಿ ಬರೆದ ಆತ್ಮಕಥೆ 'ಬಣ್ಣದ ಬದುಕು' ಕೆಲವು ವಿವರಗಳನ್ನು ಗಮನಿಸಬಹುದು. ಅಲ್ಲಿ ನಮೂದಿಸಿದ ವನವಾಸದ ರಾಮ ಲಕ್ಷ್ಮಣರ ವೇಷದಲ್ಲಿ ವೇಷಗಳು ಕಿರೀಟದ ವೇಷದ ಬದಲು ಬಿಟ್ಟ ಮೈಯ ವೇಷವನ್ನು ಹಾಕಿ ,ನಾರು ಮಡಿಯನ್ನು ಉಟ್ಟು ಮಾಡುತ್ತಿದ್ದರು ಎಂಬುದನ್ನು ತಿಳಿಸುತ್ತಾರೆ (ಪುಟ:೩೪). ಇದೇ ರೀತಿ ಹನುಮಂತ ಮತ್ತು ಕೃಷ್ಣನ ವೇಷದಲ್ಲಾದ ನಾಟಕದ ರೀತಿಯ ಆಹಾರ್ಯದ ಬದಲಾವಣೆಯನ್ನು ನಮೂದಿಸಿದ್ದಾರೆ (ಪುಟ:೩೫)

೨. ಹೊಸಹಿತ್ತಿಲು ಮಹಾಲಿಂಗ ಭಟ್ಟರ(೧೯೫೦-೧೯೯೫) ಅನುಭವ ಕಥನ 'ಲಿಂಗಣ್ಣ' ಇದರಲ್ಲಿ ಪ್ರಕಟಗೊಂಡ ಕೆಲವು ಅಂಶಗಳು ದಾಖಲಾಗಿವೆ:

೧. "ಹಿಂದೆ ರಾಮ ಲಕ್ಷಣರು ಕಾಡಿಗೆ ಹೋಗುವಾಗ ಕಿರೀಟದ ವೇಷಧಾರಿಗಳಾಗಿಯೇ ಹೋಗುವ ಕ್ರಮವಿತ್ತು. ನಾರು ಮಡಿಯನ್ನುಟ್ಟು ಬಿಟ್ಟಮಯ್ಯ ವೇಷ ಮಾಡುವ ಕ್ರಮವಿರಲಿಲ್ಲ. ಸಾಂಕೇತಿಕವಾಗಿ ಕೊರಳಿನಿಂದ ಒಂದು ಹಾರವನ್ನು ತೆಗೆದು ಇರಿಸುತ್ತಿದ್ದರು. ಇದನ್ನು ಪ್ರೇಕ್ಷಕರು ಅರ್ಥಮಾಡಿಕೊಳ್ಳುತ್ತಿದ್ದರು. ಬಿಡು ಮೈಯ ವೇಷಗಳು ಬಂದದ್ದು ಕಂಪನಿ ನಾಟಕಗಳ ಪ್ರಭಾವದಿಂದಾಗಿ" ಎಂಬುದಾಗಿ ತಿಳಿಸುತ್ತಾರೆ (ಪುಟ:೧೫೮, ಪುಟ:೧೫೧)

೨. "ನಮ್ಮ ಪರಂಪರೆಯ ಹನುಮಂತನ ಪಾತ್ರಕ್ಕೆ ಬಾಲವೇ ಇರಲಿಲ್ಲ"(ಪುಟ:೧೫೮)

೩. "ಪರಂಪರೆಯ ಶಿವನ ವೇಷದ ದಗಲೆ ,ಬಾಲ್ಮುಂಡು,ಸೊಗೆವಲ್ಲಿ, ಕಿವಿಗಳಿಗೆ ಕರ್ಣಪತ್ರ, ಕಟ್ಟು ವೀಸೆ, ಕಟ್ಟು ಗಡ್ಡ, ತಲೆಗೆ ಈಶ್ವರನ ಮುಡಿ ಎಲ್ಲವನ್ನು ತೊಟ್ಟು ಬರುತ್ತಿದ್ದರು(ಪುಟ:೧೦೨)

೩.ಯಕ್ಷಗಾನ ಸಂಶೋಧಕ ಡಾ.ರಾಘವ ನಂಬಿಯಾರ್ ಅವರ ವಿಲೋಕನ ಪುಸ್ತಕದಲ್ಲಿ. "ಶಿವ,ರಾಮ-ಲಕ್ಷ್ಮಣ ,ಕೃಷ್ಣ, ವಿಷ್ಣು, ನಾರದ ಇಂತಹ ವೇಷಗಳೆಲ್ಲ ತಮ್ಮ ಸಂಪ್ರದಾಯದಿಂದ ಹೊರಬಂದು ರವಿವರ್ಮನ ಚಿತ್ರದಂತೆ/ಚಲನಚಿತ್ರಗಳಲ್ಲಿ ಬರುವ ಪಾತ್ರಗಳಂತೆ ಬರಿ ಮೈಯಲ್ಲಿ ಕಾಣಿಸಿಕೊಂಡವು" (ಪುಟ:೧೩೧)

೪. ಯಕ್ಷಗಾನ ದಂತಕಥೆಗಳಾದ ಹಿರಿಯಡ್ಕ ಗೋಪಾಲ ರಾಯರು ಮತ್ತು ಮಾರ್ಗೋಳಿ ಗೋವಿಂದ ಸೇರೆಗಾರ್ ಈ ಹಿಂದೆ ನಡೆಸಿದ ಮಾತುಕಥೆಗಳಲ್ಲಿ ಸಹ ನಾಟಕದ ಪ್ರಭಾವವನ್ನು ಗುರುತಿಸಿದ್ದರು.

ಇನ್ನು ಬಿಡು ಮೈ ವೇಷ ಕೇವಲ ಭಾರತೀಯ ರಂಗಭೂಮಿ ಮಾತ್ರವಲ್ಲ. ಪ್ರಪಂಚದಾದ್ಯಂತ ಬೇರೆ ಬೇರೆ ಕಲೆಗಳಲ್ಲೂ ಇದೆ ಎಂಬುದು ವಾಸ್ತವ ವಿಚಾರ. ಹಾಗಂತ ಬೇರೆ ಕಡೆಗಳಲ್ಲಿ ಇವೆ ಎಂಬ ಮಾತ್ರಕ್ಕೆ ಯಕ್ಷಗಾನದಲ್ಲಿಯೂ ಅದು ಇರಲೇ ಬೇಕು ಎನ್ನುವುದು ಸರಿಯಲ್ಲ. ಯಕ್ಷಗಾನಕ್ಕೆ ಭರತ ನಾಟ್ಯ ಅಥಾವ ಅನ್ಯ ಕಲೆಗಳು/ರಂಗಭೂಮಿ ಮಾದರಿಯಲ್ಲ ಹೇಗೋ ಹಾಗೆ ಅನ್ಯ ಕಲೆ, ರಂಗಭೂಮಿಗೆ ಯಕ್ಷಗಾನವೂ ಮಾದರಿಯಲ್ಲ ಎಂಬುದನ್ನು ತಿಳಿದುಕೊಳ್ಳಬೇಕಿದೆ. ಒಂದೊಮ್ಮೆ ಎಲ್ಲ ಕಲೆಗಳಲ್ಲಿಯೂ ಒಂದೇ ನಿಯಮವನ್ನು ಅನುಸರಿಸಬೇಕು ಎನ್ನುವುದಾದರೇ ಪ್ರಪಂಚದಲ್ಲಿನ ಬೇರೆ ಬೇರೆ ಕಲೆಗಳ ಅಸ್ತಿತ್ವದ ಪ್ರಶ್ನೆಯಾಗುತ್ತದೆ.

ಎಲ್ಲ ಕಲೆಗಳಿಗೂ ಅದರದೇಯಾದ ಕ್ರಮಗಳು, ಆಚರಣೆಗಳು ಇದ್ದೇಯಿರುತ್ತದೆ ಮತ್ತು ಇರಲೇಬೇಕು. ಕಲೆಗಳ ಬಿಟ್ಟ ಮೈ ಕುರಿತಾಗಿ ಮಾಹಿತಿಯನ್ನು ಸಂಗ್ರಹಿಸುವಾಗ ಈ ಬಗ್ಗೆ ಎರಡು ಭಿನ್ನವಾದ ನಿಲವುಗಳಿವೆ. ಡಾ.ಸಂಜಯ್ ಶಾಂತಾರಾಮ ಅಂತಹ ದೊಡ್ಡ ನೃತ್ಯ ಕಲಾವಿದರೂ ಕೂಡ ತಮ್ಮ ಪ್ರದಶನಗಳಲ್ಲಿ ಬಿಟ್ಟ ಮೈ ಮಾಡದೆ, ಅಂಗಿಯನ್ನು ಧರಿಸಿ ಮಾಡುತ್ತಿದ್ದಾರೆ. ಬಿಟ್ಟ ಮೈಯಿ ಇತ್ತೀಚಿನ ಬೆಳವಣಿಗೆ ಎಂದು 'ಭಾರತೀಯ ನೃತ್ಯ ಪರಂಪರೆ' ಎಂಬ ವಿಷಯದ ಬಗ್ಗೆ ಅಧ್ಯಯನ ಮಾಡಿದ ಡಾ.ಕರುಣ ಅವರು ಉಲ್ಲೇಖಿಸಿದ್ದಾರೆ.



ಸಾಂದರ್ಭಿಕ ಚಿತ್ರ

ಕೆಲವರು ನಾಟಕದ ಆಹಾರ್ಯಗಳು ಯಕ್ಷಗಾನದಲ್ಲಿದ್ದರೇನು ಎಂಬುದಾಗಿ ಪ್ರಶ್ನಿಸುವವರು ಇದ್ದಾರೆ. ಪ್ರತಿಯೊಂದು ಕಲೆಯೂ ಕೂಡ ತನ್ನದೇಯಾದ ಸಿದ್ಧಾಂತ, ಗುಣ, ರೂಪಗಳಿಂದ ಕೂಡಿರುತ್ತದೆ. ಒಂದು ಕಲೆಯಲ್ಲಿ ಮತ್ತೊಂದು ಕಲೆಯನ್ನ ನೋಡುವುದು ಸರಿಯಲ್ಲ. ಯಕ್ಷಗಾನಕ್ಕೆ ಭರತ ನಾಟ್ಯ ಮಾನದಂಡವಲ್ಲ ಅಥವಾ ಭರತ ನಾಟ್ಯಕ್ಕೆ ಯಕ್ಷಗಾನ ಮಾದರಿಯಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಕಲೆಯ ಮೂಲ ಸ್ವರೂಪವೇನು. ಅದರ ಪರಿಭಾಷೆ, ಸಿದ್ಧಾಂತಗಳೇನು ಎನ್ನುವುದು ಮುಖ್ಯವಾಗುತ್ತದೆ. ಈ ರಂಗಭೂಮಿಯಲ್ಲಿ ಬಿಟ್ಟ ಮೈಯ ವೇಷ ಅನ್ನುವುದು ಯಕ್ಷಗಾನೀಯವಲ್ಲ ಎಂಬುದು ಇದರ ಇತಿಹಾಸದ ಪುಟಗಳಿಂದ ಕಾಣಬಹುದಾಗಿದೆ. ಆದರೆ ಈ ಬಿಟ್ಟ ಮೈಯ ವೇಷಗಳು ಪರಂಪರೆಗಿಂತ ಇಂದಿನ ರಂಗಭೂಮಿಯ ವ್ಯವಸ್ಥೆಯಲ್ಲಿ ಕೆಲವು ತಾಂತ್ರಿಕ ಕಾರಣಗಳಿಂದ ಸಮಸ್ಯೆಗಳನ್ನು ನಿರ್ಮಿಸುತ್ತಿರುವುದು ಗಮನಿಸಬೇಕಾದ ಅಂಶವಾಗಿದೆ . ಇಲ್ಲಿನ ಬರಬಹುದಾದ ತೊಡಕುಗಳನ್ನು ಎಚ್ಚರದಿಂದ ನೋಡುವ ಅನಿವಾರ್ಯ ಮತ್ತು ಅಗತ್ಯತೆಗಳನ್ನು ಮನಗಾಣಬೇಕಿದೆ.

ಇಲ್ಲಿ ಕೆಲವು ಅಂಶಗಳು

೧. ಇಂದಿನ ಪ್ರದರ್ಶನಗಳು ೧೦೦೦ ವ್ಯಾಟ್ ವಿದ್ಯುತ್ ದೀಪದಲ್ಲಿ ಯಕ್ಷಗಾನದ ಪ್ರದರ್ಶನವಾಗುವುದರಿಂದ ಮತ್ತು ಹೆಚ್ಚು ಶ್ರಮವಹಿಸಿ ಕುಣಿಯುವುದರಿಂದ, ಕಲಾವಿದರ ಮೈಯಿಂದ ಹೆಚ್ಚು ಹೆಚ್ಚು ಬೆವರು ಕಾಣಿಸಿಕೊಳ್ಳುತ್ತದೆ. ಇದು ಪ್ರೇಕ್ಷಕನಿಗೆ ಅನಗತ್ಯವಾಗಿ ಒಂದು ತರಹದ ಅಸಹ್ಯ ಭಾವವನ್ನು ಹುಟ್ಟಿಸುತ್ತದೆ.

೨. ಕೆಲವು ಕಲಾವಿದರಿಗೆ ಹೊಟ್ಟೆ ಹೆಚ್ಚು ಇರುವ ಕಾರಣದಿಂದ, ಅವರು ಕುಣಿದಾಗ ಹೊಟ್ಟೆಯು ಸಹ ಕುಣಿಯುತ್ತದೆ. ಇದು ನೋಡುಗನಿಗೆ ಹಿಂಸೆ ಎಂದೆನಿಸುತ್ತದೆ.

೩. ಬಿಟ್ಟ ಮೈಯಲ್ಲಿ ಬಣ್ಣಗಾರಿಕೆಯಲ್ಲಿ ಮುಖದ ಬಣ್ಣಕ್ಕೂ ಮೈಯ ಬಣ್ಣಕ್ಕೂ ವ್ಯತ್ಯಾಸವಿರುತ್ತದೆ. ಒಂದೊಮ್ಮೆ ಬಣ್ಣವನ್ನು ಮೈಯಿಗೆ ಹಚ್ಚಿದರೂ ಕೂಡ, ಅದು ಬೆವರಿನ ಕಾರಣಕ್ಕೆ ತೊಳೆದು ಹೊಗುತ್ತದೆ. ಮೈ ಮತ್ತು ಮುಖದ ಬಣ್ಣ ವ್ಯತ್ಯಾಸ ಕಾಣಿಸುವುದರಿಂದ ಪಾತ್ರಗಳ ಆಹಾರ್ಯದ ಸೊಗಸು ಹಾಳಾಗುತ್ತದೆ

೪. ಮೈ ರೋಮ ಅಸಹ್ಯವನ್ನು ಉಂಟು ಮಾಡುತ್ತದೆ

೫. ಸಣ್ಣ ಆಳಂಗವನ್ನು ಹೊಂದಿದವ ವ್ಯಕ್ತಿ,, ದೊಡ್ಡ ಪಾತ್ರಗಳನನ್ನು ಮಾಡುವಾಗ ಬಿಟ್ಟ ಮೈಯಲ್ಲಿ ಬಂದಾಗ, ಪಾತ್ರವಾಗಿ ಪ್ರೇಕ್ಷಕ ಒಪ್ಪಿಕೊಳ್ಳಲು ಕಷ್ಟವಾಗುತ್ತದೆ.

ಇಂತಹ ಸಮಸ್ಯೆಗಳಿಂದ ಪಾರಾಗುವುದಕ್ಕೆ ಪಾತ್ರಗಳಲ್ಲಿ ದಗಲೆಯನ್ನು ಬಳಸುವುದು ಸೂಕ್ತವಾಗಿದೆ. ಬಹುತೇಕ ಎಲ್ಲ ಮೇಲಿನ ಸಮಸ್ಯೆಗಳಿಗೆ ಅದು ಪರಿಹಾರವನ್ನು ಒದಗಿಸುವುದು ಹೌದಾಗಿದೆ. ಇನ್ನು ಇಂತಹ ಪಾತ್ರಗಳಿಗೆ ಮೈ ಬಿಟ್ಟ ಆಹಾರ್ಯಕ್ಕೂ ಹಾಗೂ ಅದನ್ನೇ ದಗಲೆಯಲ್ಲಿ ಧರಿಸಿ ಬರುವ ಆಹಾರ್ಯಕ್ಕೂ ಉಂಟುಮಾಡುವ ಒಟ್ಟಂದದ ಪರಿಣಾಮಗಳ ಬಗ್ಗೆ ಅನೇಕ ಸಲ ಚರ್ಚೆಗಳು ನಡೆದಿವೆ. ಜೊತೆಗೆ ಬಿಟ್ಟ ಮೈಯ ವೇಷಗಳು ಕಣ್ಣಿಗೆ ಒಗ್ಗಿ ಹೋಗಿವೆ ಎನ್ನುವ ಮಾತುಗಳಿವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ 'ನಟನೆಯ ಪಾಠಗಳು' ಎಂಬ ಕೃತಿಯಲ್ಲಿ ಆಹಾರ್ಯವು 'ಮೊದಲ ನೋಟಕ್ಕೆ' ಮಾತ್ರ ಬೇಕಾಗುತ್ತದೆ ವಿನಃ ನಂತರ ಪಾತ್ರಧಾರಿಯ ಪ್ರತಿಭೆಯಿಂದ ನಿರ್ಣಯವಾಗುತ್ತದೆ ತಿಳಿಸುತ್ತಾರೆ. ಹಾಗಾಗಿ ಪಾತ್ರಧಾರಿಯ ಪಾತ್ರದ ಚಿಂತನೆ, ಮಂಥನ, ಪರಿಣಾಮಕಾರಿಯದ ಯಕ್ಷಗಾನೀಯ ನೃತ್ಯ, ಮಾತು, ಅಭಿನಯ ಇತ್ಯಾದಿಗಳಿಂದ ಆ ಪಾತ್ರದ ಗುಣಮಟ್ಟ ನಿರ್ಧಾರವಾಗುತ್ತದೆ ವಿನಃ ದಗಲೆಯಿಂದಲೂ ಅಲ್ಲ, ಬಿಟ್ಟ ಮೈಯ ವೇಷದಿಂದಲ್ಲ ಎನ್ನುವುದು ಚಿಂತನೀಯ ವಿಷಯವಾಗಿದೆ.

**ಲೇಖಕರು –ರವಿ ಮಡೋಡಿ, ಬೆಂಗಳೂರು**

## ಕಾಲಮಿತಿ ಯಕ್ಷಗಾನದ ಪರಿಣಾಮ

ಇಬ್ಬಗೆಯ ಪರಿಸ್ಥಿತಿ ಇದು. ಎಲ್ಲ ಕಾಲದಲ್ಲೂ ಎಲ್ಲ ವಿಷಯದಲ್ಲೂ ಧನಾತ್ಮಕ ಅಭಿಪ್ರಾಯ ಋಣಾತ್ಮಕ ಅಭಿಪ್ರಾಯ ಇದ್ದೇ ಇದೆ. ಕಾಲಮಿತಿ ಯಕ್ಷಗಾನದ ಬಗ್ಗೆಯೂ ಹಾಗೇ ಇದು ಒಳ್ಳೆಯದು ಎಂದು ಕೆಲವರ ಅಭಿಪ್ರಾಯವಾದರೆ ಇದು ಸರಿಯಲ್ಲ ಎನ್ನುವವರೂ ಇದ್ದಾರೆ. ಈಗ ಪಾರದರ್ಶಕವಾದ ವಿಮರ್ಶೆ ಅಗತ್ಯವಿದೆ. ಪರಿಸರ ಪರಿಸ್ಥಿತಿಯ ಬಗ್ಗೆ ಯೋಚಿಸಬೇಕು. ಸುಮಾರು ಐವತ್ತು ಅರವತ್ತು ವರ್ಷಗಳಿಂದ ಯಕ್ಷಗಾನದಲ್ಲಿ ದುಡಿದಿದ್ದೇನೆ. ತೆಂಕು ಬಡಗಿನ ಹೆಚ್ಚಿನ ಎಲ್ಲಾ ಮೇಳಗಳಲ್ಲಿಯೂ ನಾನು ತಿರುಗಾಟ ಮಾಡಿದ್ದೇನೆ. ಮನರಂಜನೆಯ ಮಾಧ್ಯಮಗಳು ಕಡಿಮೆ ಇದ್ದ ಆ ಕಾಲದಲ್ಲಿ ಇಡೀ ರಾತ್ರಿಯ ಆಟ ಅನಿವಾರ್ಯವೂ ಅಗತ್ಯವೂ ಆಗಿತ್ತು. ಯಾಕೆಂದರೆ ಹೆಚ್ಚಿನವರು ಕಾಲ್ನಡಿಗೆಯಲ್ಲಿಯೇ ಬಹುದೂರ ಆಟಕ್ಕೆ ಬರುವವರಿದ್ದರು. ಈಗ ವಾಹನ ವಿರಹಿತರ ಸಂಖ್ಯೆ ವಿರಳ. ಹಾಗಾಗಿ ಎಷ್ಟು ಹೊತ್ತಿಗೂ ಬರಬಹುದು ಹೋಗಬಹುದು. ಆದರೆ ಈಗ ಯಕ್ಷಗಾನ ಪ್ರಿಯರಾಗಿ ಆರ್ಥಿಕ ಅನುಕೂಲ ವಿಲ್ಲದವರಿಗೆ ಕಾಲಮಿತಿ ಆಟ ಹಿತವೆನಿಸದು. ಕಾಲಮಿತಿ ಆಟದಿಂದ ಕಲಾವಿದರಿಗೂ ಪ್ರೇಕ್ಷಕರಿಗೂ ಇನ್ನೊಂದು ಸಮಸ್ಯೆ. ರಾತ್ರಿ ಹಿಂದಿರುಗಿ ವಾಹನದಲ್ಲಿ ಹೋಗುವವರಿಗೆ ಕಾಡುಪ್ರಾಣಿಗಳಿಂದಾಗಿ ಮಾರ್ಗ ಸರಿ ಇಲ್ಲದೆಯೋ ತೊಂದರೆ ಆಗಲೂಬಹುದು. ಸ್ತ್ರೀಯರಿಗೂ ತೊಂದರೆ ಎಂದೇ ಹೇಳಬಹುದು ಯಕ್ಷಗಾನವನ್ನು ಅಭಿಮಾನದಿಂದ ಪ್ರೀತಿಯಿಂದ ನೋಡುವ ವರ್ಗ ಒಂದು. ಇನ್ನು ಕೇವಲ ಮನರಂಜನೆಗಾಗಿ ಅಮಲಿನಲ್ಲಿ ಬರುವವರೂ ಇದ್ದಾರೆ. ಕಾಲಮಿತಿಯಿಂದಲಾಗಿ ಇಂತಹವರಿಂದ ಅಪಾಯವಾದರೆ ಆಶ್ಚರ್ಯವಿಲ್ಲ. ಒಂದು ಸಮಾಧಾನವೆಮದರೆ ಕಾಲಮಿತಿ ಆಟಕ್ಕೆ ಬರುವವರು ಸಾಮಾನ್ಯ ಮರಳಿ ಹೋಗುವ ವ್ಯವಸ್ಥೆಯಲ್ಲಿಯೇ ಬಂದಿರುತ್ತಾರೆಂಬುದು ಸಮಾಧಾನ. ಇನ್ನು ಕಲಾವಿದರಲ್ಲಿ ಹೆಚ್ಚಿನವರಿಗೆ ಸ್ವಂತ ವಾಹನವಿರುತ್ತದೆ. ಮರಳಿ ಮನೆ ಸೇರಿಕೊಳ್ಳುತ್ತಾರೆ ಕೆಲವರು. ದೂರದ ಊರಿನಿಂದ ಬಂದು ಕಲಾವಿದರಾಗಿ ಸೇರ್ಪಡೆಗೊಂಡಿರುವ ಕಲಾವಿದರಿಗೆ ಕಾಲಮಿತಿಯಿಂದಾಗಿ ತೊಂದರೆಯೇ ಹೆಚ್ಚು. ಇನ್ನು ಈಗ ಯಕ್ಷಗಾನವನ್ನೇ ಪೂರ್ಣ ಪ್ರಮಾಣ ನಂಬದೇ ಬೇರೆ ಬೇರೆ ಉದ್ಯೋಗದಲ್ಲಿ ತಮ್ಮನ್ನು ತೊಡಗಿಸಿಕೊಂಡವರಿದ್ದಾರೆ. ಉಪನ್ಯಾಸಕರಿದ್ದಾರೆ. ಬೇರೆ ಬೇರೆ ಕಂಪನಿ ಫ್ಯಾಕ್ಟರಿ ಸೊಸೈಟಿ ಉದ್ಯೋಗಸ್ಥರಿಗೆ ಸಾಮಾನ್ಯ ಸಂಜೆ ಐದು ಗಂಟೆಗೆ ಅವರಿಗೆ ಉದ್ಯೋಗ ವಿರಾಮ. ಅಂಥವರಿಗೆ ಕಾಲಮಿತಿ ಸ್ವಲ್ಪ ತೊಡಲಾಗಬಹುದೇನೋ ಒಟ್ಟಿನಲ್ಲಿ ಹೇಳಬೇಕೆಂದರೆ ಕಾಲಕ್ಕೆ ತಕ್ಕಂತೆ ನಮ್ಮನ್ನು ಒಗ್ಗಿಸಿಕೊಳ್ಳಬೇಕಾದ ಅನಿವಾರ್ಯವಿದೆ. ಪ್ರಪಂಚವೇ ಪರಿವರ್ತನಾಶೀಲವಾದುದು ಎಂದ ಮೇಲೆ ಕಲೆಯ ಕಾಲವೂ ಬದಲಾವಣೆ ತಪ್ಪೇನಿಲ್ಲ.

ಮೊದಲಿನಂತೆ ಆಟ ನೋಡಿ ಮರುದಿನ ವಿಶ್ರಾಂತಿಯಿಂದಿರುವ ವ್ಯವಧಾನ ಈಗ ಯಾರಲ್ಲೂ ಇಲ್ಲ. ಯಾಂತ್ರಿಕ ಜೀವನದ ಈ ಘಟ್ಟದಲ್ಲಿ ಇಡೀ ರಾತ್ರಿ ಆಟವಾಡಿದರೆ ಖಾಲಿ ಕುರ್ಚಿಗೆ ಮಧ್ಯರಾತ್ರಿ ನಂತರದ ನಮ್ಮ ಪ್ರದರ್ಶನ ಎಂಬಂತಾಗುತ್ತದೆ. ಇನ್ನು ಕೆಲವರು ಯಕ್ಷಗಾನವನ್ನು ಹರಕೆ ಆಟವಾಗಿ ಆಡಿಸುವುದು ಅನ್ನ ಸಂತರ್ಪಣೆ ರಾತ್ರಿ ಆಟದವರಿಗೆ ಮಾತ್ರವಲ್ಲ. ಪ್ರೇಕ್ಷರಿಗೂ ಚಟ್ಟಂಬಡೆ ಚಹಾ ವಿತರಿಸುತ್ತಾರೆ. ಬೆಳಿಗ್ಗೆ ಆಟ ಮುಗಿಯುವಾಗ ವೀಳ್ಯ ಕೊಡುವ ಸಂಪ್ರದಾಯ ಆಗ ಮೇಳದ ಮೇನೇಜರ್ ಮಂಗಳ ಸಮಯ ಬಂತು ಆಟ ಆಡಿಸುವವರನ್ನು ಸ್ನಾನ ಮಾಡಿ ವೀಳ್ಯ ಕೊಡಲು ಬರುವುದಕ್ಕೆ ಹೇಳು ಎಬ್ಬಿಸಿ ಬಾ ಎಂದು ಜನ ಕಳಿಸಬೇಕಾದ ಪರಿಸ್ಥಿತಿಯೂ ಇದೆ. ಹಾಗಾಗಿಯೇ ಕಾಲಮಿತಿಯೇ ಸರಿ. ಕಲಾವಿದರ ಉತ್ಸಾಹಕ್ಕೆ ಪ್ರೋತ್ಸಾಹಕರಾಗಿ ಪ್ರೇಕ್ಷಕರು ಇದ್ದೇ ಇರುತ್ತಾರೆ. ಆದರೆ ಆಟದ ನಂತರ ಪ್ರೇಕ್ಷಕರು ಕಲಾವಿದರು ಪ್ರಯಾಣಿಸುವಲ್ಲಿ ಎಚ್ಚರವಿರಬೇಕಾದ ಅಗತ್ಯವಿದೆ.



ಸಾಂದರ್ಭಿಕ ಚಿತ್ರ

*ಲೇಖಕರು – ಎಂ ಕೆ ರಮೇಶ್ ಆಚಾರ್ ಯಕ್ಷಗಾನ ಕಲಾವಿದರು*

## ಕುಂಜಾಲು ಶೈಲಿಯ ಪ್ರಾತಿನಿಧಿಕ ಭಾಗವತ ಗಾನ ಕೋಗಿಲೆ – ದಿ. ನೆಲ್ಲೂರು ಮರಿಯಪ್ಪಾಚಾರ್ ಒಂದು ನೆನಪು



ಪ್ರೋ.ಎಸ್.ವಿ.ಉದಯ ಕುಮಾರ ಶೆಟ್ಟಿ



*ಬಡಗುತಿಟ್ಟಿನ ಒಂದು ಪ್ರಮುಖ ಹಾಡುಗಾರಿಕೆಯ ಶೈಲಿಯಾದ ಕುಂಜಾಲು ಶೈಲಿಯ ಪ್ರಾತಿನಿಧಿಕ ಭಾಗವತರಾಗಿ, ತಮ್ಮ ಕೋಮಲವಾದ ಕಂಠದಿಂದ ಗಾನ ಕೋಗಿಲೆ ಎಂಬ ಬಿರುದನ್ನು ಪಡೆದ ಭಾಗವತ ಶ್ರೇಷ್ಠ ನೆಲ್ಲೂರು ಮರಿಯಪ್ಪಆಚಾರ್ ಅವರು..*

ಬಡಗುತಿಟ್ಟು ಹಾಡುಗಾರಿಕೆಯ ಒಂದು ಪ್ರಮುಖ ಶೈಲಿಯಾದ ಕುಂಜಾಲು ಶೈಲಿಯ ಭಾಗವತರ ಸಾಲಿನಲ್ಲಿ ಕೇಳಿ ಬರುವ ಪ್ರಮುಖ ಹೆಸರು ದಿ. ನೆಲ್ಲೂರು ಮರಿಯಪ್ಪ ಆಚಾರ್ಯರದ್ದು. ಕುಂಜಾಲು ಶೇಷಗಿರಿ ಕಿಣಿ, ಜಾನುವಾರುಕಟ್ಟೆ ಗೋಪಾಲಕೃಷ್ಣ ಕಾಮತ್, ಗುಂಡ್ಮಿ ರಾಮಚಂದ್ರ ನಾವಡರು,
ನೀಲಾವರ ರಾಮಕೃಷ್ಣಯ್ಯ, ಗೋರ್ಪಾಡಿ ವಿಠಲ ಪಾಟೀಲ್, ಕಾಳಿಂಗ ನಾವಡರ ನಂತರ ಈ ಸಮರ್ಥ ಶೈಲಿಯನ್ನು ಕಳೆದ ಶತಮಾನದ ಕೊನೆಯವರೆಗೆ ದಾಟಿಸಿ ಯಕ್ಷರಸಿಕರಿಂದ ಗಾನ ಕೋಗಿಲೆ ಎಂಬ ಬಿರುದು ಪಡೆದು ಅಜರಾಮರರಾದ ಆಚಾರ್ಯರು ಬಡಗುತಿಟ್ಟು ಹಾಡುಗಾರಿಕೆಯ ದಂತಕಥೆ. "ಭಾಗವತ ಶೇಷಗಿರಿ ಕಿಣಿಯವರ ಪದ್ಯ ನಾನು ಕೇಳಿಲ್ಲ, ಆದರೆ ನನ್ನ ಪದ್ಯ ಕೇಳಿದ ಹಿರಿಯರು ಇದು ಕುಂಜಾಲು ಶೈಲಿ ಎಂದು ಹೇಳಿದಾಗ ಅಭಿಮಾನವಾಗುತ್ತದೆ" ಎಂದು ವಿನಮ್ರವಾಗಿ ಹೇಳುತ್ತಿದ್ದ ಇವರು ಸರಳ ಸ್ವಭಾವದ ಮುಗ್ಧ ಕಲಾವಿದರಾಗಿದ್ದರು.

ಶೃಂಗೇರಿ ತಾಲೂಕು ಸಮೀಪ ನೆಲ್ಲೂರು ಎಂಬಲ್ಲಿ ಗುಂಡಾಚಾರ್ ಮತ್ತು ಸುಬ್ಬಮ್ಮ ದಂಪತಿಗಳ ಪುತ್ರನಾಗಿ ಜನಿಸಿದ ಆಚಾರ್ಯರು ತಮ್ಮಲ್ಲಿರುವ ಅಭಿಜಾತ ಸುಪ್ರತಿಭೆಯನ್ನು ಮುಂದಿರಿಸಿಕೊಂಡು ಹಗಲಲ್ಲಿ ಹೂವಿನಕೋಲು ರಾತ್ರಿ ಚಿಕ್ಕಮೇಳ ಕಟ್ಟಿಕೊಂಡು ಕಂದೀಲು ಬೆಳಕಿನಲ್ಲೇ ಧ್ವನಿವರ್ಧಕವಿಲ್ಲದೇ ಹಾಡುತ್ತಾ ಸುತ್ತಾಡಿ ಭಾಗವತರಾದವರು. ಅಂದು ಡಾ/ ಶಿವರಾಮ ಕಾರಂತರು ಕಡಿಯಾಳಿ ದೇವಸ್ಥಾನದಲ್ಲಿ ಯಕ್ಷಗಾನ ತರಬೇತಿ ನೀಡುತಿದ್ದರು. ಅಲ್ಲಿ ಹಿರಿಯರಾದ ಜಾನುವಾರು ಕಟ್ಟೆಯವರು, ಹಿರಿಯಡ್ಕ ಗೋಪಾಲರಾವ್, ನೀಲಾವರ ರಾಮಕೃಷ್ಣಯ್ಯನವರಿಂದ ಅಲ್ಪ ಸಲ್ಪ ಕಲಿತದ್ದೇ ಅವರ ಯಕ್ಷ ಶಿಕ್ಷಣ.

ಶ್ರೀ ಮಂದಾರ್ತಿ ಮೇಳದಲ್ಲಿ ಪ್ರಥಮವಾಗಿ ತಾಳ ಹಿಡಿದ ಆಚಾರ್ಯರು ಮತ್ತೆ ಹಿಂದಿರುಗಿ ನೋಡಲೇ ಇಲ್ಲ.ಹಂತ ಹಂತವಾಗಿ ಮೇಲೇರುತ್ತಿದ್ದ ಅವರ ಪ್ರತಿಭೆಯನ್ನು ಗುರುತಿಸಿದ ಆಗಿನ ಸಾಲಿಗ್ರಾಮ ಮೇಳದ ಭಾಗವತರಾದ ಸೋಮನಾಥ ಹೆಗ್ಡೆಯವರು ಅವರನ್ನು ಶ್ರೀ ಸಾಲಿಗ್ರಾಮ ಮೇಳಕ್ಕೆ ಕರೆತಂದರು. ಮರವಂತೆ ನರಸಿಂಹದಾಸರಂತಹ ಮೇರು ಭಾಗವತರಿಗೆ ಸಹ ಭಾಗವತರಾಗಿ ದುಡಿದು ಮುಂದೆ ಸಾಲಿಗ್ರಾಮ ಮೇಳದ ಪ್ರಧಾನ ಭಾಗವತರಾಗಿ ಪ್ರಸಿದ್ದಿಯ ಉತ್ತುಂಗವನ್ನು ತಲುಪಿದರು. ಅಲ್ಲಿ ಇವರ ಹಾಡುಗಾರಿಕೆ ಮತ್ತು ಹುಂಚದಕಟ್ಟೆ ಶ್ರೀನಿವಾಸ ಆಚಾರ್ಯರ ಮದ್ದಳೆ, ಕೆಮ್ಮಣ್ಣು ಆನಂದರ ಚಂಡೆ ಯಕ್ಷಗಾನ ಹಿಮ್ಮೇಳದಲ್ಲಿ ಕ್ರಾಂತಿ ಮೂಡಿಸಿತ್ತು. ಈ ಗಜಗಟ್ಟಿ ಹಿಮ್ಮೇಳದಲ್ಲಿ ಜ್ವಾಲಾ, ಅಮಾತ್ಯನಂದಿನಿ, ರಾಜನರ್ತಕಿ ಮುಂತಾದ ಪ್ರಸಂಗಗಳು ತಿರುಗಾಟ ಪೂರ್ತಿ ಯಶಸ್ವಿಯಾಗಿ ಪ್ರದರ್ಶನಗೊಂಡವು. ಬಳಿಕ ಕಾಳಿಂಗ ನಾವಡರ ಉಚ್ರಾಯ ಕಾಲದಲ್ಲಿಅವರೊಂದಿಗೆ ತಿರುಗಾಟ ಮಾಡಿದ ಅವರು ವಯಸ್ಸಿನಲ್ಲಿ ತಮಗಿಂತ ಅತ್ಯಂತ ಕಿರಿಯರಾದ ನಾವಡರಿಗೆ ಸಹಭಾಗವತರಾಗಿ ತಮ್ಮ ಸೌಜನ್ಯವನ್ನು ಮೆರೆದಿದ್ದರು. ಕಾಳಿಂಗ ನಾವಡ ವಿರಚಿತ ನಾಗಶ್ರೀ ಪ್ರಸಂಗದಲ್ಲಿ ಮೊದಲ ವರ್ಷವೇ ಪ್ರಾರಂಭದ ಭಾಗಕ್ಕೆ ತಾನು ಭಾಗವತಿಕೆ ಮಾಡಿ ನಂತರದ ಭಾಗಕ್ಕೆ ನಾವಡರನ್ನು ಕಳುಹಿಸಿ ಈಗಿನ ಕಾಲದ ಯುವ ಭಾಗವತರಿಗೆ ಆದರ್ಶಪ್ರಾಯರಾಗಿದ್ದರು. ಬಳಿಕ ಆಗ ತಾನೆ ಹೊಸದಾಗಿ ಡೇರೆ ಮೇಳವಾದ ಮೂಲ್ಕಿ ಮೇಳಕ್ಕೆ ಪ್ರಧಾನ ಭಾಗವತರಾಗಿ ಸೇರಿ ನಗರ ಜಗನ್ನಾಥ ಶೆಟ್ಟಿ ಐರೋಡಿ ಗೋವಿಂದಪ್ಪ, ಅರಾಟೆ ಮಂಜುನಾಥ, ಎಂ.ಎ.ನಾಯ್ಕ್, ಬೇಗಾರ್ ಪದ್ಮನಾಭ, ಗೋಡೆ ನಾರಾಯಣ ಹೆಗಡೆಯವರಂತ ಮೇರು ಕಲಾವಿದರನ್ನು ರಂಗದಲ್ಲಿ ಕುಣಿಸಿದ್ದರು. ಅಮೃತೇಶ್ವರಿ ಮತ್ತು ಮೂಲ್ಕಿ ಮೇಳಕ್ಕೂ ನಡೆದ ಜೋಡಾಟದಲ್ಲಿ ಪ್ರಾಚಾರ್ಯ ನಾರಣಪ್ಪ ಉಪ್ಪೂರರೊಂದಿಗೆ ಭಾಗವತಿಕೆ ಮಾಡುವ ಯೋಗವೂ ಅವರಿಗೆ ದೊರಕಿತ್ತು.

ದೀರ್ಘಕಾಲ ಡೇರೆ ಮೇಳಗಳಲ್ಲಿ ತಿರುಗಾಟ ಮಾಡಿದ ಅವರು ಬಳಿಕ ಬಡಗಿನ ಎರಡು ದಿಗ್ಗಜ ಮೇಳಗಳಾದ ಶ್ರೀ ಮಂದಾರ್ತಿ ಮೇಳದಲ್ಲಿ ಭೋಜರಾಜ ಹೆಗ್ಡೆಯವರ ಯಜಮಾನಿಕೆಯಲ್ಲೂ, ಮಾರಣಕಟ್ಟೆ ಮೇಳದಲ್ಲಿ ಎಂ.ಎ.ಹೆಗ್ಡೆಯವರ ಯಜಮಾನಿಕೆಯಲ್ಲಿ ಸುದೀರ್ಘಕಾಲ ತಿರುಗಾಟ ಮಾಡಿ ನಿವೃತ್ತರಾದರು. ಡಾ/ ಶಿವರಾಮ ಕಾರಂತರ ಯಕ್ಷರೂಪಕದಲ್ಲಿ ಭಾಗವಹಿಸಿ ವಿದೇಶಯಾತ್ರೆಯನ್ನೂ ಆ ಕಾಲದಲ್ಲಿ ನಡೆಸಿದ್ದರು. ದೈವದತ್ತವಾದ ಕೋಮಲ ಶಾರೀರ, ಅಜಾನುಬಾಹು ಶಾರೀರದಿಂದ ಭಾಗವತನಿಗೆ ಬೇಕಾದ ಎಲ್ಲಾ ಸಲ್ಲಕ್ಷಣಗಳನ್ನು ಹೊಂದಿದ್ದ ಅವರು ಮುಂಡಾಸು ಕಟ್ಟಿ ಕಚ್ಚೆ ಹಾಕಿ ಕುಳಿತರೆಂದರೆ ನೋಡುವುದೇ ಚಂದ. ಅತ್ಯಂತ ಏರುಶ್ರುತಿಯಲ್ಲಿ ಎಲ್ಲಿಯೂ ಅಪಸ್ವರ ಬಾರದ ಹಾಗೆ ನಿರರ್ಗಳವಾಗಿ ಹಾಡಬಲ್ಲ ಅವರ ಮೋಹನ, ಬಿಲಹರಿ, ಸಾವೇರಿ ರಾಗಗಳ ಭಾಮಿನಿ ಪದ್ಯಗಳು ಕರ್ಣಾನಂದ ನೀಡುತ್ತಿದ್ದವು. ಕಾಂಭೋಧಿ, ಮದ್ಯಮಾವತಿ, ಹಿಂದೋಳ, ಮೋಹನ, ಸಾವೇರಿ, ಅಠಾಣ, ಆರಭಿ ಮುಂತಾದ ಹಳೆಯ ರಾಗಗಳನ್ನು ಪೌರಾಣಿಕ ಪ್ರಸಂಗಗಳಲ್ಲಿ ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದ ಅವರ ಹಾಡುಗಾರಿಕೆ ಕೇಳಲೆಂದೇ ಬರುವ ಅಪಾರ ಪ್ರೇಕ್ಷಕರ ವರ್ಗವೇ ಕರಾವಳಿ ಭಾಗದಲ್ಲಿ ಆ ಕಾಲದಲ್ಲಿ ನಿರ್ಮಾಣವಾಗಿತ್ತು. ಕರ್ಣಾರ್ಜುನ ಕಾಳಗ, ದ್ರೌಪದೀ ಪ್ರತಾಪ, ಜಾಂಬವತಿ ಕಲ್ಯಾಣ, ಕೃಷ್ಣಾರ್ಜುನ, ಮೀನಾಕ್ಷಿ ಕಲ್ಯಾಣ ಮುಂತಾದ ಪ್ರಸಂಗಗಳ ಅವರ ಪದ್ಯಗಳು ಉತ್ಕೃಷ್ಟ ಮಾದರಿಯವು ಎಂದು ದಾಖಲಾಗಿತ್ತು. ಪೌರಾಣಿಕ ಪ್ರಸಂಗಗಳಿಗೆ ಸ್ವತಃ ನಾವಡರೇ ಅವರನ್ನು ಬೆಳಗಿನ ಜಾವಕ್ಕೇ ಕಳುಹಿಸುತ್ತಿದ್ದರು. ಸ್ವತಹ ಸಂಗೀತ ಜ್ಞಾನವಿದ್ದ ಕೆರೆಮನೆ ಮಹಾಬಲ ಹೆಗಡೆಯವರೇ ಇವರ ಪದ್ಯಕ್ಕೆ ತಲೆದೂಗಿ ಬೆನ್ನುತಟ್ಟಿ ಹರಸಿದ್ದರು. ತನ್ನ ಸಂಪರ್ಕಕ್ಕೆ ಬಂದ ಆ ಕಾಲದ ಮೇರು ಕಲಾವಿದರಾದ ಹಾರಾಡಿ ಕುಷ್ಠ ಗಾಣಿಗ, ವಂಡಾರು ಬಸವ, ಪೆರ್ಡೂರು ರಾಮ, ಉಡುಪಿ ಬಸವ, ಶಿರಿಯಾರ ಮಂಜು, ನೀಲಾವರ ಮಹಾಬಲ ಶೆಟ್ಟಿ

ಮುಂತಾದವರಿಂದ ಶಹಬ್ಬಾಸ್‌ಗಿರಿ ಪಡೆದದ್ದು ಅವರ ಹೆಚ್ಚುಗಾರಿಕೆಯಾಗಿತ್ತು. ಜೀವಿತದ ಅವಧಿಯಲ್ಲಿ ಮರಿಯಪ್ಪ ಆಚಾರ್ಯರಿಗೆ ಸಂದ ಪ್ರಶಸ್ತಿಗಳು ಗಣಿತಕ್ಕೆ ಸಿಗದಷ್ಟು. ಕರ್ನಾಟಕ ರಾಜ್ಯ ಪ್ರಶಸ್ತಿ, ಯಕ್ಷಗಾನ ಕಲಾರಂಗ ಪ್ರಶಸ್ತಿ, ಶ್ರೀ ಮಂದಾರ್ತಿ ಕ್ಷೇತ್ರದ ಹಾರಾಡಿ ರಾಮಗಾಣಿಗ ಪ್ರಶಸ್ತಿ, ಸಾಲಿಗ್ರಾಮ ಮೇಳದ ಪಳ್ಳಿ ಸೋಮಥ ಹೆಗ್ಡೆ ಪ್ರಶಸ್ತಿ, ಎಂ.ಎ.ಹೆಗ್ಡೆ ಪ್ರಶಸ್ತಿ, ಸೀತಾನದಿ ಪ್ರಶಸ್ತಿ, ನಿಟ್ಟೂರು ಭೋಜಪ್ಪ ಸುವರ್ಣ ಪ್ರಶಸ್ತಿ, ಉಡುಪಿ ಯಕ್ಷಗಾನ ಕೇಂದ್ರದ ವಿವಿಧ ಗೋಷ್ಠಿಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿರುತ್ತಿದ್ದ ಅವರಿಗೆ ಅಲ್ಲಿನ ಸನ್ಮಾನ, ಕಾರ್ಕಡ ಶ್ರೀನಿವಾಸ ಉಡುಪ ಪ್ರಶಸ್ತಿ ಸಹಿತ ನೂರಾರು ಸನ್ಮಾನಗಳು ಅವರಿಗೆ ಸಂದಿವೆ, ಬಡಗುತಿಟ್ಟಿನ ಹಾಡುಗಾರಿಕೆಯ ಕುಂಜಾಲು ಶೈಲಿಯ ಹಿರಿಯ ಕೊಂಡಿಯಾಗಿದ್ದ ಅವರು ಹತ್ತು ವರ್ಷದ ಹಿಂದೆ ಇಹಲೋಕವನ್ನು ತ್ಯಜಿಸಿದ್ದರು. – ***ಪ್ರೋ.ಎಸ್.ವಿ.ಉದಯಕುಮಾರ ಶೆಟ್ಟಿ ಮಣಿಪಾಲ***

## ಧೀರ ಕಲೆಯೊಳಗೆ ಕೀರವಾಣಿಯರು – 06



**ಸಾಯಿಸುಮಾ ಎಂ. ನಾವಡ**

***ಶ್ರೀಮತಿ ರತ್ನಾವತಿ ಹೆಚ್.ಎಂ. ತಲಂಜೇರಿ – ಯಕ್ಷಗಾನ ಸಂಘ ಕಟ್ಟಿದ ಗಡಿನಾಡಿನ ದಿಟ್ಟ ಮಹಿಳೆ***

ಎಳವೆಯಲ್ಲಿ ಓದುವ ಆಸಕ್ತಿಯಿದ್ದರೂ ಎಲ್ಲರಿಗೆ ಅದಕ್ಕೆ ಬೇಕಾದ ಪ್ರೋತ್ಸಾಹದ ವಾತಾವರಣ ಸಿಕ್ಕುವುದಿಲ್ಲ. ಪ್ರೋತ್ಸಾಹ ದೊರೆತವರು ಓದಿ ಏನೂ ಸಾಧಿಸುವುದೂ ಇಲ್ಲ. ಪ್ರಥಮ ಪಿಯುಸಿಯಲ್ಲಿ ಇರುವಾಗಲೇ ಮದುವೆಯಾಗಬೇಕಾಗಿ ಬಂದು, ಅಧ್ಯಾಪಕರು, ಬಹಳ ಕ್ರಿಯಾಶೀಲ ವ್ಯಕ್ತಿಯೂ ಆಗಿದ್ದ ಕೃಷ್ಣಭಟ್ ಅವರ ಕೈ ಹಿಡಿಯುತ್ತಾರೆ ರತ್ನಾವತಿಯವರು. ಒಮ್ಮೆಗೆ ವಿದ್ಯಾಭ್ಯಾಸ ಮೊಟಕುಗೊಂಡರೂ ಪತಿಯ ಪ್ರೋತ್ಸಾಹ ಇವರ ಆಸಕ್ತಿಗೆ ನೀರೆರೆದು ಪೋಷಿಸುತ್ತದೆ.

ಪುತ್ತೂರು ತಾಲೂಕಿನ ಹಾಲುಮಜಲು ನಿವಾಸಿ ಈಶ್ವರಭಟ್ ಮತ್ತು ಶಂಕರಿ ಅಮ್ಮನವರ ಮಗಳಾಗಿ ಜನನ. ಬಾಲ್ಯದಲ್ಲಿ ಬಡತನವಿದ್ದರೂ ಮನೆಯವರ ಪ್ರೀತಿಗೆ ಯಾವ ಕೊರತೆಯೂ ಇರಲಿಲ್ಲ.  ತನ್ನ ನಾಲ್ಕನೇ ವಯಸ್ಸಿಗೆ ಅಕ್ಕಂದಿರ ಜೊತೆ ಶಾಲೆಯ ಮೆಟ್ಟಿಲನ್ನು ಹತ್ತಿದ ಬಹಳ ಚುರುಕಿನ ಹುಡುಗಿ. ಪ್ರಥಮ ಪಿಯುಸಿಯವರೆಗಿನ ವಿದ್ಯಾಭ್ಯಾಸವನ್ನು ಬಹಳ ಕಷ್ಟಪಟ್ಟೇ ಮಾಡಿದ್ದರೂ ೧೯೭೮ ರಲ್ಲಿ ಕೃಷ್ಣಭಟ್ಟರನ್ನು ಕೈಹಿಡಿಯುವ ಕಾಲಕ್ಕೆ ಅದು ಅರ್ಧಕ್ಕೆ ನಿಂತಿತು. ಬಳಿಕ ಸ್ವತಃ ಅಧ್ಯಾಪಕರಾಗಿದ್ದ ಕೃಷ್ಣಭಟ್ಟರು ವಿದ್ಯೆಯ ಮಹತ್ವವನ್ನರಿತವರಾದ್ದರಿಂದ ತನ್ನ ಪತ್ನಿಯನ್ನು ಮುಂದಕ್ಕೆ ಓದಿಸಿ, ಪಿಯುಸಿ, ಟಿ.ಸಿ.ಹೆಚ್., ಹಿಂದಿ ಪ್ರವೀಣ(ಖಾಸಗಿ), ಬಿ.ಎ. ಪದವಿಯನ್ನು ಪಡೆದುಕೊಳ್ಳುವಂತೆ ಮಾಡಿದರು. ವೃತ್ತಿಯಲ್ಲಿ ಶಿಕ್ಷಕಿಯಾಗಿಸಿದರು. ಪ್ರವೃತ್ತಿಯಾದ ಯಕ್ಷಗಾನಕ್ಕೆ ನೀರೆರೆದು ಪೋಷಿಸಿದರು. ಅನೇಕ ಶಾಲೆಗಳಲ್ಲಿ ಶಿಕ್ಷಕಿಯಾಗಿ ೨೦೧೭ ರವರೆಗೆ ಅನೇಕ ಮಕ್ಕಳ ಭವಿಷ್ಯವನ್ನು ಕಟ್ಟಿದರು. ೧೯೮೮ ರಲ್ಲಿ ಅನುದಾನಿತ ಪ್ರಾಥಮಿಕ ಶಾಲೆ ಅಡ್ಯನಡ್ಕದಲ್ಲಿ ಶಿಕ್ಷಕ ವೃತ್ತಿಗೆ ಸೇರಿ, ೧೯೯೪ ರಲ್ಲಿ ಸರಕಾರಿ ಪ್ರಾಥಮಿಕ ಶಾಲೆಗೆ ಶಿಕ್ಷಕಿಯಾಗಿ ನೇಮಕವಗೊಳ್ಳುತ್ತಾರೆ. ಎತ್ತುಗಲ್ಲು, ದೇಲಂತಬೆಟ್ಟು, ಅಮ್ಮೆ, ಮುಂತಾದೆಡೆಯಲ್ಲಿ ಕರ್ತವ್ಯ ನಿರ್ವಹಿಸಿ ೨೦೧೭ ರಲ್ಲಿ ನಿವೃತ್ತಿ ಹೊಂದುತ್ತಾರೆ.  ೧೯೮೯ ರಲ್ಲಿ ಅಡ್ಯನಡ್ಕ ಮಹಿಳಾ ಮಂಡಲಿಯ ಮುಂದಾಳತ್ವ ಸ್ವೀಕರಿಸಿ ಮೊದಲ ಬಾರಿಗೆ ತನ್ನ ೩೨ ನೇ ವಯಸ್ಸಿಗೆ 'ಸುದರ್ಶನ ವಿಜಯ' ಎಂಬ ಪ್ರಸಂಗದಲ್ಲಿ ಮಹಿಳಾ ಯಕ್ಷಗಾನದಲ್ಲಿ ದೇವೇಂದ್ರನ ಪಾತ್ರ ನಿರ್ವಹಿಸಿ ರಂಗವೇರುತ್ತಾರೆ. ಆ ಬಳಿಕ ಹಿಂದಿರುಗಿ ನೋಡಿದ್ದೇ ಇಲ್ಲ. ಆವಾಗಲೇ ಮಹಿಳಾ ಯಕ್ಷಗಾನ ತಂಡವನ್ನು ಸ್ಥಾಪನೆ ಮಾಡಿದರು ರತ್ನಾವತಿಯವರು. ಇದಕ್ಕೆಲ್ಲಾ ಮುಖ್ಯ ಕಾರಣ ತನ್ನ ಪತಿ ಎನ್ನುವುದನ್ನು ಮರೆಯದ ಇವರು ಅವರ ಪ್ರೋತ್ಸಾಹದಿಂದಲೇ ತಮ್ಮ ತಂಡದ ಪ್ರದರ್ಶನಗಳನ್ನು ಅನೇಕ ಕಡೆಗಳಲ್ಲಿ ಕೊಡುತ್ತಾರೆ. ಮಹಿಳಾ ಯಕ್ಷಗಾನ ಅಷ್ಟೊಂದು ಚಾಲ್ತಿಯಲ್ಲಿಲ್ಲದ ಕಾಲವದು. ಅವಕಾಶಗಳು ಬಹಳಷ್ಟು ಕಡೆಯಲ್ಲಿ ಸಿಗುತ್ತಿದ್ದವು. ಆದರೆ ದಾಖಲೀಕರಣಕ್ಕೆ ಅನುಕೂಲ ಆ  ಸಮಯದಲ್ಲಿಲ್ಲದ ಕಾರಣ ಇಂದಿನಂತೆ ನಾವು ಮಾಡಿದ ವೇಷಗಳನ್ನು ಚಿತ್ರೀಕರಣಗಳನ್ನು ನೋಡುವುದಕ್ಕಾಗುವುದಿಲ್ಲ. ಇವತ್ತು ತಂತ್ರಜ್ಞಾನ ಮುಂದುವರೆದಿದೆ. ಎಲ್ಲವೂ ದಾಖಲೆಯಾಗುತ್ತದೆ ಎನ್ನುತ್ತಾರೆ ಇವರು.  ಹಳ್ಳಿ ಪ್ರದೇಶದ ಯುವತಿಯರನ್ನು,  ಮಹಿಳೆಯರನ್ನು ಒಟ್ಟು ಸೇರಿಸಿ ರಾಜ್ಯಾದ್ಯಂತ ಸುಮಾರು ಆರು ನೂರಕ್ಕೂ ಮಿಕ್ಕಿ ಯಕ್ಷಗಾನ ಪ್ರದರ್ಶನಗಳನ್ನು ಅಡ್ಯನಡ್ಕದ ಮಹಿಳಾ ಯಕ್ಷಗಾನ ಸಂಘ ಇವರ ನೇತೃತ್ವದಲ್ಲಿ ಕೊಟ್ಟಿದೆ ಎನ್ನುವುದು ಒಂದು ಹೆಮ್ಮೆಯ ವಿಷಯ. ಇವರು ಕಂಸ, ಅರ್ಜುನ, ಹಂಸಧ್ವಜ, ಶತ್ರುಪ್ರಸೂದನ, ದೇವೇಂದ್ರ, ರುಕ್ಮಾಂಗದ, ವೀರಮಣಿ, ಅಂದಕಾಸುರ, ಮುರಾಸುರ, ನರಕಾಸುರ, ಕೀರ್ತಿವರ್ಮ, ಸುಧರ್ಮ, ಕೃಷ್ಣ, ವಿಷ್ಣು, ಅನಿವಾರ್ಯತೆಯೊದಗಿದಾಗ ಕಚ್ಚೆ ಸ್ತ್ರೀವೇಷ ಹಾಗೂ ಹಾಸ್ಯಪಾತ್ರಗಳನ್ನು ಕೂಡ ನಿರ್ವಹಿಸಿ ಜನಮೆಚ್ಚುಗೆ ಪಡೆದ ಹಿರಿಮೆ ರತ್ನಾವತಿಯವರಿಗೆ ಸಲ್ಲುತ್ತದೆ. ತಮ್ಮ ತಂಡದ ಪ್ರದರ್ಶನಗಳಲ್ಲಿ ಹಾಗೂ ಅನೇಕ ಕಡೆಗಳಲ್ಲಿ ಏಕಾದಶಿ









ದೇವೀಮಹಾತ್ಮೆಯ ಮುರಾಸುರನ ಪಾತ್ರವನ್ನೇ ಸುಮಾರು ೪೨೬ ಸಲ ಹಾಕಿರುವೆ ಎಂದುಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಯಕ್ಷಗಾನ ಪಾತ್ರಧಾರಿಯಾಗಿ ಮಾತ್ರವಲ್ಲದೇ ತಾಳಮದ್ದಳೆಗಳಲ್ಲಿ ಬಾಗವಹಿಸಿ ಸುಮಾರು ೨೫೦ ಪ್ರದರ್ಶನಗಳನ್ನು ಕೊಟ್ಟಿದ್ದಾರೆ ರತ್ನ ಟೀಚರ್ ಅವರು. ಮಂಗಳೂರು ಆಕಾಶವಾಣಿಯಲ್ಲಿ ಮೊದಲು ೧೯೯೩ ರಲ್ಲಿ ಇವರ ಮಹಿಳಾ ತಾಳಮದ್ದಳೆ ತಂಡವೊಂದು ಇತ್ತು. ಕಾಲಕ್ರಮೇಣ ಮನೆ, ಸಂಸಾರದ ಜವಾಬ್ದಾರಿ ಹೆಚ್ಚಾದ ಕಾರಣ ಈಗ ಹವ್ಯಾಸಿ ಕೂಡವಿದೆ. ಅದರಲ್ಲಿ ಅರ್ಥಧಾರಿಯಾಘಿ ಭಾಗವಹಿಸುತ್ತಾರೆ ಇವರು. ತಮ್ಮ ತಂಡದ ಯಕ್ಷಗಾನ ತರಬೇತಿಗಾಗಿ ಉಪ್ಪಳ ಕೃಷ್ಣಮಾಸ್ತರ್, ಉಂಡೆಮನೆ ಶ್ರೀಕೃಷ್ಣಭಟ್ ಅವರನ್ನು ಕರೆಸಿ, ತರಬೇತಿ ಕೊಡಿಸಿದ್ದಾರೆ. ಬರೀ ಮಹಿಳಾ ತಂಡ ಮಾತ್ರವಲ್ಲದೇ ಮಕ್ಕಳ ಯಕ್ಷಗಾನ ತಂಡವನ್ನೂ ಕಟ್ಟುತ್ತಾರೆ. ಈಗ ಹವ್ಯಾಸಿಗಳನ್ನು ಸಂಘಟಿಸಿಯೂ ಯಕ್ಷಗಾನ ಪ್ರದರ್ಶನಗಳನ್ನೂ ನೀಡುತ್ತಾರೆ. ಇವರ ಪ್ರತಿಭೆ ಇಷ್ಟು ಮಾತ್ರವಲ್ಲದೇ ಸಾಹಿತ್ಯಾಸಕ್ತಿಯೂಇವರಿಗಿದೆ. ಕಥೆ, ಕವನ, ಚುಟುಕು, ಶಿಶುಸಾಹಿತ್ಯ, ಗಝಲ್, ವೈಚಾರಿಕ ಲೇಖನಗಳು, ಒಳ್ನುಡಿಗಳನ್ನು ಬರೆಯುವುದರಲ್ಲೂ ನಿಸ್ಸೀಮರು. ಆಕಾಶವಾಣಿಯಲ್ಲಿ ಯಕ್ಷಗಾನ ತಾಳಮದ್ದಳೆ ಕಾರ್ಯಕ್ರಮ ಮಾತ್ರವಲ್ಲದೇ ಮಹಿಳಾ ಮತ್ತು ಮಕ್ಕಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಕೂಡ ನೀಡಿದ್ದಾರೆ. ವಧುವಿನ ಅಲಂಕಾರವೂ ಇವರ ವಿಶೇಷ ಹವ್ಯಾಸ. ಇಷ್ಟರವರೆಗೆ ೧೦೦೨ ವಧುಗಳಿಗೆ ಶೃಂಗಾರವನ್ನು ಯಾವ ಪ್ರತಿಫಲಾಪೇಕ್ಷೆಯಿಲ್ಲದೇ ಮಾಡಿದವರಿವರು. ಒಟ್ಟಾರೆಯಾಗಿ ಹೇಳುವುದಾದರೆ ಕ್ರಿಯಾಶೀಲ ವ್ಯಕ್ತಿತ್ವ ಇವರದು. ರತ್ನಾಕೆ. ಭಟ್ ಎಂದೇ ಹೆಚ್ಚಿನವರಿಗೆ ಚಿರಪರಿಚಿತರು.

ಇವರ ಸಾಧನೆಗೆ ೫೦ಕ್ಕೂ ಮಿಕ್ಕಿ ವೇದಿಕೆಗಳಲ್ಲಿ ಪ್ರಶಸ್ತಿ, ಸಂಮಾನಗಳು ಅವಾಗಿಯೇ ಅರಸಿಕೊಂಡು ಬಂದಿವೆ. ಗಡಿನಾಡ ಉತ್ತಮ ಮಹಿಳಾ ಶಿಕ್ಷಕಿ–ಸಂಘಟಕಿ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಜಾನಪದ ಅಕಾಡೆಮಿ ಪ್ರಶಸ್ತಿ, ಅಖಿಲ ಹವ್ಯಕ ಸಭಾದ ಪುರಸ್ಕಾರ, ಕನ್ನಡ–ಸಂಸ್ಕೃತಿ ಇಲಾಖೆಯ ಪುರಸ್ಕಾರ ಮುಂತಾದವು ಇವರ ಕೀರ್ತಿಯನ್ನು ಉತ್ತುಂಗಕ್ಕೇರಿಸಿವೆ. ತಮ್ಮೆಲ್ಲಾ ಯಶಸ್ಸಿನ ಹಿಂದಿನ ಶಕ್ತಿ ತಮ್ಮ ಪತಿ ಎನ್ನುವುದನ್ನು ಮರೆಯದೇ, ಒಬ್ಬ ಮಗ ಮತ್ತು ಒಬ್ಬಾಕೆ ಮಗಳನ್ನು ಹೊಂದಿದ ತುಂಬು ಸಂಸಾರ ಇವರದು. ಅವರು ಕೂಡ ಸಂಸಾರಸ್ಥರು. ಈ ಸುಖೀಸಂಸಾರದೊಂದಿಗೆ ಇವರ ಬಾಳು ಹಾಗೂ ಕಲಾಜೀವನ ಇನ್ನಷ್ಟು ಬೆಳಗುವಂತಾಗಲಿ ಎಂಬ ಹಾರೈಕೆ ನಮ್ಮದು.

**ಲೇಖಕರು – ಸಾಯಿಸುಮಾ ಎಂ. ನಾವಡ, ಕಾರಿಂಜ**

## ಯಕ್ಷ ಮೆಲುಕು

ಕಲಾವಿದರ ಯಕ್ಷಾನುಭವದ ಪ್ರಮುಖ ನೆನಪು/ಘಟನೆಗಳನ್ನು ದಾಖಲೀಕರಿಸುವ ಅಂಕಣ ಇದು. ಪ್ರತೀ ಸಂಚಿಕೆಯಲ್ಲಿ ಇಬ್ಬರು ಕಲಾವಿದರ ಅನುಭವಗಳನ್ನು ಇಲ್ಲಿ ಸಾದರಪಡಿಸುತ್ತಿದ್ದೇವೆ. ಈ ತಿಂಗಳ ಸಂಚಿಕೆಯಲ್ಲಿ ಕಲಾವಿದರಾದ **ಚೆನ್ನಪ್ಪ ಗೌಡ ಸಜಿಪ** ಹಾಗೂ ಸ್ತ್ರೀವೇಷ ಕಲಾವಿದರಾದ **ಕೆದಿಲ ಜಯರಾಮ ಭಟ್** ರವರ ಅನುಭವಗಳ ತುಣುಕು ಪ್ರಕಟವಾಗಿದೆ.

- **ಸ್ವಾತಂತ್ರ್ಯ ಪೂರ್ವ ಕಾಲದಲ್ಲೂ ಯಕ್ಷಗಾನಕ್ಕೆ ಪ್ರೇಕ್ಷಕರು ಬಹಳಷ್ಟಿದ್ದರು**
- **ಐವತ್ತು ವರ್ಷಗಳ ಹಿಂದೆ ಕಲಾವಿದರ ಸಂಭಾವನೆ ದಿನಕ್ಕೆ ಒಂದು ರುಪಾಯಿ**
- **ಜೋಡಾಟಗಳೂ ಹಿಂದಿನ ಕಾಲದ ಪ್ರಮುಖ ಆಕರ್ಷಣೆಯಾಗಿತ್ತು**





**ಕಲಾವಿದರು – ಚೆನ್ನಪ್ಪ ಗೌಡ ಸಜಿಪ**
**ತಂದೆ– ವೀರಪ್ಪ ಗೌಡ, ತಾಯಿ – ಕಮಲಾಕ್ಷಿ**
**ಮೊದಲು ಸೇವೆ ಸಲ್ಲಿಸಿದ ಮೇಳ – ಕೂಡ್ಲು ಮೇಳ**
**ಯಕ್ಷಗಾನದ ಗುರುಗಳು –ಮುದುಕುಂಜ ವಾಸುದೇವ ಪ್ರಭು**
**ಧರ್ಮಪತ್ನಿ – ಕಮಲಾಕ್ಷಿ**
**ಸುಪುತ್ರ – ಸುನಿಲ್ ಕುಮಾರ್**
**ಸುಪುತ್ರಿ – ರಕ್ಷಿತಾ**




ಕೂಡ್ಲು ಮೇಳದಲ್ಲಿ ಯಕ್ಷಗಾನದ ಬದುಕು ಆರಂಭಿಸಿದ ಹಿರಿಯ ಕಲಾವಿದರಾದ ಶ್ರೀಯುತ ಚೆನ್ನಪ್ಪ ಗೌಡರು ಯಕ್ಷಯಾನದ ಕೊನೆಯ ದಿನಗಳನ್ನು ಕಟೀಲು ಮೇಳದಲ್ಲಿ ಕಳೆದವರು ಸುಮಾರು ೯೫ ವರ್ಷ ಪ್ರಾಯದ ಈ ಕಲಾವಿದರು ಸ್ವಾತಂತ್ರ್ಯ ಪೂರ್ವದ ಕಲಾವಿದರ ನಿಕಟ ಒಡನಾಟವನ್ನು ಹೊಂದಿದ್ದು ಆ ದಿನಗಳ ತಮ್ಮ ನೆನಪನ್ನು ಹಂಚಿಕೊಂಡಿದ್ದಾರೆ.

ಸ್ವಾತಂತ್ರ್ಯ ಪೂರ್ವದಲ್ಲಿ ಆಗಿನ್ನೂ ಕಲಾವಿದರಾಗಿರದೆ ಚೆನ್ನಪ್ಪ ಗೌಡರಿಗೆ ಸ್ವಾತಂತ್ರ್ಯ ಪೂರ್ವದಲ್ಲಿ ಯಕ್ಷಗಾನ ಪ್ರದರ್ಶನಗಳನ್ನು ವೀಕ್ಷಿಸಿದ ನೆನಪಿದೆ. ಅಂದಿನ ದಿನಗಳಲ್ಲಿ ಯಕ್ಷಗಾನದ ರಂಗಸ್ಥಳವನ್ನು ಅಡಿಕೆ ಮರದ ಕಂಬ ನೆಟ್ಟು ನಿರ್ಮಿಸುತ್ತಿದ್ದರು. ಜೀಟಿಗೆಗೆ ಎಣ್ಣೆ ಹಾಕುತ್ತಾ ರಂಗಸ್ಥಳದ ನಾಲ್ಕು ಕಂಬಗಳ ಬುಡದಲ್ಲಿ ನಾಲ್ಕು ಜನ ನಿಲ್ಲುತ್ತಿದ್ದರು ಆಗಿನ ಕಾಲದಲ್ಲಿ ಕರೆಂಟ್ ಜನರೇಟರ್ ಇದ್ದಿರಲಿಲ್ಲ. ನಂತರ ಪೆಟ್ರೋಲ್ ಸೀಮೆಎಣ್ಣೆಯ ೮ ಲೈಟ್ ಗಳನ್ನು ಬಳಸುತ್ತಿದ್ದರು. ಎಂದು ತಾವು ಕಂಡ ಯಕ್ಷಗಾನದ ನೆನಪನ್ನು ಹಂಚಿಕೊಳ್ಳುತ್ತಾರೆ. ಮಧೂರಿನಲ್ಲಿ ಮೂಡಪ್ಪ ಸೇವೆಯ ಸಂದರ್ಭ ೧೮ ನೇ ವಯಸ್ಸಿನಲ್ಲಿ ಮೊದಲ ಬಾರಿಗೆ ಕೂಡ್ಲು ಮೇಳದಲ್ಲಿ ಇವರು ಗೆಜ್ಜೆ ಕಟ್ಟುತ್ತಾರೆ. ಶಾಲೆಗೆ ಹೋಗುವಾಗ ತಿಂಗಳ ಹಬ್ಬದ ಸಂದರ್ಭ ಐದಾರು ಜನ ಸೇರಿಕೊಂಡು ವಾಲಿ ಮೋಕ್ಷ, ಸುಗ್ರೀವ ಕಾಳಗ ಪಂಚವಟಿ ಅತಿಕಾಯ ಮೋಕ್ಷ ಮೊದಲಾದ ಆಟಗಳನ್ನು ಆಡಿಕೊಂಡು ಬೆಳೆದವರು ಅಲ್ಲಿಂದ ಇವರಿಗೆ ಯಕ್ಷಗಾನದ ಬಗ್ಗೆ ಆಸಕ್ತಿ ಮೂಡಿತು. ಭಾಗವತರಾದ ಶಂಕರನಾರಣಪ್ಪಯ್ಯ, ಶೇಣಿ, ವಿಟ್ಲ ಜೋಯಿಸ ಅಗರಿ ಭಾಗವತರೊಂದಿಗೆ ಇವರು ತಿರುಗಾಟ ನಡೆಸುತ್ತಾರೆ. ಬಲಿಪ ನಾರಾಯಣ ಭಾಗವತರು, ಪುತ್ತಿಗೆ, ಜೋಯಿಸರು, ಮಾಂಬಾಡಿ ಗಣಪತಿ ಭಟ್, ಕುಂಡೆಚ್ಚ ಗೋಪಾಲಕೃಷ್ಣ ಭಟ್, ಕಟೀಲಿನಲ್ಲಿ ಬಣ್ಣದ ಮಾಲಿಂಗ, ಪುತ್ತೂರು ಕೃಷ್ಣ ಭಟ್, ಮಾಡಂಗಾಯಿ ಕೃಷ್ಣ ಭಟ್, ಹಾಸ್ಯ ಕಲಾವಿದ ಕೆಕ್ಕುಂಜೆ ಗೋಪಾಲಕೃಷ್ಣ ಭಟ್ ಮೊದಲಾದ ಕಲಾವಿದರೊಂದಿಗೆ ಯಕ್ಷ ಜೀವನವನ್ನು ಕಳೆದಿದ್ದಾರೆ. ಆಗಿನ ಸಮಯದಲ್ಲಿ ಧರ್ಮಸ್ಥಳ ಮೇಳದಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಕುರಿಯ ವಿಠಲ ಶಾಸ್ತ್ರಿಗಳು ಇವರ ಮಾರ್ಗದರ್ಶಕರಾಗಿದ್ದರು. ಆಗ ಮೂರು ದಿನಕ್ಕೆ ಮೂರು ರುಪಾಯಿ ಸಂಭಾವನೆ ದೊರಕುತ್ತಿತ್ತು. ಅದರಲ್ಲೇ ಎಲ್ಲಾ ಖರ್ಚು ಹೋಗಬೇಕು. ಕಟೀಲು ಮೇಳದಲ್ಲಿ ೧೨ ವರ್ಷಗಳ ಕಾಲ ತಿರುಗಾಟ ನಡೆಸಿ ನಂತರ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಮುದುಕುಂಜ ವಾಸುದೇವ ಪ್ರಭು ಇವರಿಗೆ ಹೆಜ್ಜೆ ಹೇಳಿ ಕೊಟ್ಟವರು ಹಾಗೂ ಕುರಿಯ ವಿಠಲ ಶಾಸ್ತ್ರಿಗಳು ರಂಗದ ಸಾಕಷ್ಟು ಪಾಠಗಳನ್ನು ಮಾಡಿದ್ದಾರೆ. ಜೊತೆ ರಂಗಸ್ಥಳದಲ್ಲಿ ಪ್ರಸಂಗ, ಕುಣಿತವನ್ನು ನೋಡಿಯೇ ಅಭ್ಯಾಸ ಮಾಡುತ್ತಿದ್ದರು.

ಆಗಿನ ಕಾಲದಲ್ಲಿ ಧರ್ಮಸ್ಥಳ, ಕಟೀಲು, ಕೂಡ್ಲು ಮೇಳ, ಕಾಸರಗೋಡು ಮೇಳ ಮೊದಲಾದವು ಪ್ರದರ್ಶನ ನೀಡುತ್ತಿದ್ದವು. ತಿರುಗಾಟದಲ್ಲಿ ಹರಕೆ ಆಟಗಳು ಹಾಗೂ ಬಯಲಾಟವೇ ಹೆಚ್ಚು ನಡೆಯುತ್ತಿದ್ದವು. ನಂತರದ ದಿನಗಳಲ್ಲಿ ಕಾಲ್ಪನಿಕ ಪ್ರಸಂಗಗಳು ಶುರುವಾದವು. ಅರುವ ಪುತ್ತೂರು ಬಪ್ಪನಾಡು ಮೇಳಗಳಲ್ಲಿ ತುಳು ಪ್ರಸಂಗಕ್ಕೆ ಬೇಡಿಕೆ ಹೆಚ್ಚಾಯಿತು. ಮುಲ್ಕಿ ಬಪ್ಪನಾಡುವಿನಲ್ಲಿ ಒಂದೇ ಸ್ಥಳದಲಿ ೮ ರಿಂದ ೯ ಪ್ರದರ್ಶನ ಆಗುತ್ತಿದ್ದ ಕಾಲವೂ ಇತ್ತು. ತುಳು ಪ್ರಸಂಗ ಕಾಲ್ಪನಿಕ ಪ್ರಸಂಗಗಳಲ್ಲಿ ಇತ್ತೀಚಿಗೆ ಸಾಕಷ್ಟು ಬೆಳವಣಿಗೆಗಳಾಗಿವೆ. ಎಂದವರು ನುಡಿಯುತ್ತಾರೆ.

ಅಂದಿನ ಪ್ರೇಕ್ಷಕರ ಬಗ್ಗೆ ಚೆನ್ನಪ್ಪ ಗೌಡರ ಅಭಿಪ್ರಾಯ – ಆಗಿನ ಕಾಲದಲ್ಲಿ ವಿದ್ಯಾವಂತರು ಕಡಿಮೆ. ಹಳೆ ಕ್ರಮದ ಯಕ್ಷಗಾನ ನೋಡಲಿಕ್ಕೆ ದೂರದೂರಿನಿಂದ ಬರ್ತಿದ್ರು. ಯಕ್ಷಗಾನದ ಆಕರ್ಷಣೆ ಸೆಳೆತ ಜನರಲ್ಲಿ ಹೆಚ್ಚಾಗಿಯೇ ಇತ್ತು. ಆಗಿನ ಕಾಲದಲ್ಲಿ ಜೋಡಾಟವೂ ಒಂದು ಪ್ರಮುಖ ಆಕರ್ಷಣೆಯಾಗಿತ್ತು. ಮೂರು ಮೇಳದ ಆಟ ಕೂಡಾ ನಡೆಸ್ತಾ ಇದ್ರು. ಹೆಚ್ಚಾಗಿ ದೇವಿ ಮಹಾತ್ಮೆ ಪ್ರಸಂಗ ಆಡಿ ತೋರಿಸಲಾಗುತ್ತಿತ್ತು. ಮೂರು ಮೇಳದಲ್ಲಿಯೂ ಒಂದೆ ಪ್ರಂಸಗ ಇಟ್ಟುಕೊಂಡು ಜೋಡಾಟ ಮಾಡ್ತಿದ್ರು. ಎಂದು ತಮ್ಮ ಕಾಲದ ನೆನಪನ್ನು ಹಂಚಿಕೊಳ್ಳುತ್ತಾರೆ.

ಯಕ್ಷಗಾನದಲ್ಲಿ ಗರತಿ ಪಾತ್ರ ಹಾಗೂ ಶೃಂಗಾರದ ಪಾತ್ರಗಳಲ್ಲಿಯೂ ಈಸಿ ಜಯಿಸಿ ಹೆಸರು ಮಾಡಿದ ಖ್ಯಾತ ಸ್ತ್ರೀವೇಷ ಕಲಾವಿದರು ಕೆದಿಲ ಜಯರಾಮ ಭಟ್ ರವರು. ತಮ್ಮ ಪಿಯುಸಿ ವಿದ್ಯಾಭ್ಯಾಸ ಮುಗಿಯುತ್ತಿದ್ದಂತೆಯೇ ಬೇರೆಡೆ ಕೆಲಸಕ್ಕೆ ಪ್ರಯತ್ನಿಸಿದವರು ಯಾವುದೇ ಕೆಲಸ ಸಿಗದೇ ಹೋದಾಗ ಯಕ್ಷಗಾನ ಕ್ಷೇತ್ರಕ್ಕೆ ಕಾಲಿಡುತ್ತಾರೆ. ಇವರು ಧರ್ಮಸ್ಥಳಕ್ಕೆ ಭೇಟಿ ನೀಡಿದ ಸಂದರ್ಭ ಧರ್ಮಸ್ಥಳ ಕೇಂದ್ರದಲ್ಲಿ ಯಕ್ಷಗಾನ ಕಲೆಗೆ ಸಂದರ್ಶನ ನಡೆಯುತ್ತಿರುತ್ತದೆ. ಆಗ ಹೊರಗಡೆ ನಿಂತು ನೋಡುತ್ತಿದ್ದ ಇವರನ್ನು ಪಾಂಡುರಂಗ ಠಾಕ್ರೆಯವರು ಕರೆಸಿ ತರಗತಿಗೆ ಸೇರಿಸಿಕೊಳ್ಳುತ್ತಾರೆ. ಅಲ್ಲಿ ಒಂದು ವರ್ಷ ಯಕ್ಷಗಾನ ತರಬೇತಿ ಪಡೆದು ಮೇಳಕ್ಕೆ ಸೇರಬೇಕು ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ನಂತರ ಒಂದು ವರ್ಷ ಅರುವ ಸೋಮನಾಥೇಶ್ವರಿ ಮೇಳದಲ್ಲಿ ಆರಂಭದ ತಿರುಗಾಟ ನಡೆಸುತ್ತಾರೆ. ಆರಂಭದ ದಿನಗಳಲ್ಲಿ ಭಾಗವತರಾದ ಲೀಲಾವತಿ ಬೈಪಡಿತ್ತಾಯ ಹಾಗೂ ಸಹ ಕಲಾವಿದರ ಸಹಕಾರ ಅತ್ಯುತ್ತಮವಾಗಿ ದೊರಕುತ್ತದೆ. ಇದರಿಂದ ಇವರು ಉತ್ತಮ ಜನಾಭಿಪ್ರಾಯ ಪಡೆಯಲು ಸಾಧ್ಯವಾಗುತ್ತದೆ.

ಆ ಸಮಯದಲ್ಲೂ ಕಲಾವಿದ ಗುರುತಿಕೊಳ್ಳಲು ಟೆಂಟ್ ಮೇಳದಲ್ಲಿ ತಿರುಗಾಟ ಮಾಡಬೇಕು ಎಂಬ ಅಭಿಪ್ರಾಯ ಎಲ್ಲರಲ್ಲೂ ಇತ್ತು, ಒಮ್ಮೆ ಟೆಂಟ್ ಮೇಳದಲ್ಲಿ ಪ್ರಚಲಿತಕ್ಕೆ ಬಂದರೆ ಅದು ೪-೫ ವರ್ಷದವರೆಗೂ ಜೀವದಾನ ನೀಡುತ್ತಿತ್ತು ಎಂಬುದಾಗಿ ಇವರು ಹೇಳುತ್ತಾರೆ. ಆದ್ರೆ ಕಲಾವಿದನಿಗೆ ಪೌರಾಣಿಕ ಅಡಿಪಾಯ ಇಲ್ಲದೇ ಇದ್ರೆ ಏನೂ ಮಾಡಲಿಕ್ಕೆ ಸಾಧ್ಯವಿಲ್ಲ ಎಂಬುದು ಇವರ ಅನಿಸಿಕೆ.

ಪೆರ್ಡೂರು ಸಾಲಿಗ್ರಾಮ ಮೇಳದಲ್ಲಿ ಕಾಲ್ಪನಿಕ ಪಾತ್ರಗಳಲ್ಲಿ ಜನ ಇವರನ್ನು ಹೆಚ್ಚಾಗಿ ಗುರುತಿಸಿದ್ರು. ಮೊದಲ ಬಾರಿಗೆ ಪುತ್ತೂರಿನ ಜಾತ್ರೆಯಲ್ಲಿ ಮಂಟಪರು ಹಾಗೂ ಚಿಟ್ಟಾಣಿಯವರ ಭಸ್ಮಾಸುರ ಮೋಹಿನಿ ಪ್ರಸಂಗದ ಜೋಡಿಯನ್ನು ನೋಡಿದ ಇವರಿಗೆ ಬಡಗು ಶೈಲಿಯ ಯಕ್ಷಗಾನ ಬಹುವಾಗಿ ಸೆಳೆಯಿತು. ಬಡಗಿನಲ್ಲಿ ಒಂದು ವರ್ಷ ತಿರುಗಾಟ ಮಾಡಬೇಕೆಂಬ ಅಭಿಲಾಷೆ ಮೂಡಿಕೊಂಡಿತು. ಅಲ್ಲಿನ ಹೊಂದಾಣಿಕೆ, ಸ್ವಚ್ಛತೆ, ರಂಗದ ನಡೆ ನೋಡಿ ಇಂತಹ ವೇದಿಕೆ ಬೇಕು ಅಂತ ಅವರಿಗೆ ಅನಿಸಿತು. ಆ ಕಾಲದಲ್ಲಿ ತೆಂಕು ತಿಟ್ಟಿನ ಯಕ್ಷಗಾನದಲ್ಲಿ ಕುಣಿತಕ್ಕೆ ಶೃಂಗಾರಕ್ಕೆ ಪ್ರಧಾನ್ಯತೆ ಇರಲಿಲ್ಲ. ಬಡಗಿನ ಪಾತ್ರ ನಿರ್ವಹಣೆ ಕಲಿಯಬೇಕು ಎಂಬ ಉದ್ದೇಶದಿಂದ ಬಡಗಿನ ಪೆರ್ಡೂರು ಮೇಳಕ್ಕೆ ಸೇರ್ಪಡೆಯಾಗಲು ನಿರ್ಧರಿಸುತ್ತಾರೆ. ಆದರೆ ಅವರನ್ನು ಪೆರ್ಡೂರು ಮೇಳಕ್ಕೆ ಆಹ್ವಾನ ನೀಡಿದವರು ಕಾರಣಾಂತರಗಳಿಂದ ಇವರನ್ನು ಮಂದಾರ್ತಿ ಮೇಳಕ್ಕೆ ಕಳುಹಿಸುತ್ತಾರೆ. ಬಡಗಿನ ಅನುಭವ ಇಲ್ಲದೇ ಇರುವುದರಿಂದ ಮಂದಾರ್ತಿ ಮೇಳದಲ್ಲಿ ಇವರಿಗೆ ಕಲಿಯುವುದಕ್ಕೆ ಅವಕಾಶ ದೊರಕುತ್ತದೆ. ಪ್ರಾರಂಭದಲ್ಲಿ ಮಂದಾರ್ತಿ ಎರಡನೇ ಮೇಳಕ್ಕೆ ಸೇರ್ಪಡೆಯಾಗುತ್ತಾರೆ. ಆಗ ಮಂದಾರ್ತಿ ಮೇಳದಲ್ಲಿ ಕಾಲ್ಪನಿಕ ಪೌರಾಣಿಕ ಎರಡೂ ರೀತಿಯ ಪ್ರಸಂಗಗಳು ಪ್ರದರ್ಶನ ಕಾಣುತ್ತಿದ್ದವು. ಪಾಪಣ್ಣ ವಿಜಯ, ಸತೀ ಶೀಲಾವತಿ, ಚೈತ್ರ ಕೋಗಿಲೆ, ಯುವಕರನ್ನು ಬಹುವಾಗಿ ಸೆಳೆದ ಪ್ರಸಂಗಗಳಾಗಿತ್ತು. ತೆಂಕಿನಲ್ಲಿ ಕೆದಿಲ ಜಯರಾಮರು ಕೇವಲ ವೇಶ್ಯೆಯ ಪಾತ್ರಗಳನ್ನು ನಿರ್ವಹಿಸಲು ಮಾತ್ರ ಸೀಮಿತ ಅಂತ ಅನಿಸಿಕೊಂಡಿದ್ದರು. ಆಗ ಪಾತ್ರಗಳ ಬದಲಾವಣೆ ಆಗದೇ ಇದ್ರೆ ಒಂದೇ ರೀತಿಯ ಪಾತ್ರಗಳಿಗೆ ಬ್ರಾಂಡ್ ಆಗಿಬಿಟ್ಟರೆ ಕಲಾವಿದನ ಬೆಳವಣಿಗೆಯಾಗುವುದಿಲ್ಲ ಎಂಬುದನ್ನು ಇವರು ಅರಿತುಕೊಳ್ಳುತ್ತಾರೆ. ಆ ಕಾರಣದಿಂದಲೇ ಅನೇಕ ಬಾರಿ ಪೆರ್ಡೂರು ಮೇಳದಲ್ಲಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭ ಸುಬ್ರಮಣ್ಯ ಧಾರೇಶ್ವರರು ಭಾಗವತರಾಗಿದ್ದಾಗ ಗಂಭೀರ ಪಾತ್ರಗಳನ್ನು ಜಗಳ ಮಾಡಿ ಪಡೆದುಕೊಂಡಿದ್ದರು. ಅಲ್ಲಿಂದ ಕೆದಿಲ ಜಯರಾಮ ಭಟ್ ರವರು ಯಾವುದೇ ಪಾತ್ರಗಳನ್ನು ನಿರ್ವಹಿಸಬಲ್ಲರು ಎಂಬ ಅಭಿಪ್ರಾಯ ಜನರಲ್ಲಿ ಮೂಡಿತು. ಕೆದಿಲ ಜಯರಾಮ್ ಭಟ್ ಇವರು ಹೆಚ್ಚಾಗಿ ಎಂ ಕೆ ರಮೇಶ್ ಆಚಾರ್ ರವರ ಪಾತ್ರಗಳನ್ನು ಗಮನಿಸುತ್ತಾರೆ, ಹಾಗೂ ಮೆಚ್ಚಿಕೊಳ್ಳುತ್ತಾರೆ. ಅವರಲ್ಲಿರುವ ಅನುಭವಗಳನ್ನು ಪಡೆದುಕೊಳ್ಳಲು ಅವರೊಂದಿಗೆ ಸುರತ್ಕಲ್ ಮೇಳದಲ್ಲಿ ನಾಲ್ಕು, ವರ್ಷಗಳ ಕಾಲ ತಿರುಗಾಟ ನಡೆಸಿದ್ದಾರೆ. ಈಗಿನ ಕಲಾವಿದರಿಗೆ ಜ್ಞಾನದ ಬಂಡವಾಳ ಬಹಳ ಕಡಿಮೆ ಇದೆ. ತಾವು ಮಾಡಿಕೊಳ್ಳುವ ಡ್ರೆಸ್ ವೇಷದ ಅಂದ ಹಾಗೂ ಕುಣಿತವೇ ಪ್ರಾಮುಖ್ಯ ಎಂದು ತಿಳಿದುಕೊಂಡಿರುತ್ತಾರೆ. ಅವರಿಗೆ ಮಾರ್ಗದರ್ಶನದ ಕೊರತೆಯಿಂದ ಅನೇಕ ತಪ್ಪುಗಳನ್ನು ಮಾಡುತ್ತಾರೆ. ಫೇಸ್ ಬುಕ್ ವಾಟ್ಸಾಪ್ ಮಾಧ್ಯಮಗಳ ಬೆಳವಣಿಗೆಯಿಂದ ಅದರಲ್ಲಿ ಕಲಾವಿದ ಪ್ರಚಾರ ಗಳಿಸಿಕೊಳ್ಳಬಲ್ಲ. ಆದರೆ ಅದು ಶಾಶ್ವತ ಅಲ್ಲ. ಕಲಾವಿದ ರಂಗದಲ್ಲಿ ಏನು ಕಸುಬು ಮಾಡ್ತಾನೆ, ಆತನ ಬಂಡವಾಳ ಮತ್ತು ಸಾಧನೆ ಮಾತ್ರ ಶಾಶ್ವತವಾಗಿ ಉಳಿಯುವುದು ಎಂದು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸುತ್ತಾರೆ

**ಕಲಾವಿದರು – ಕೆದಿಲ ಜಯರಾಮ್ ಭಟ್**

**ತಂದೆ – ದಿ. ಶಂಕರ ನಾರಾಯಣ ಭಟ್**

**ತಾಯಿ – ದಿ. ಲಕ್ಷ್ಮಿಯಮ್ಮ**

**ಜನ್ಮ ದಿನಾಂಕ – ೦೪-೦೪-೧೯೬೪**

**ವಿದ್ಯಾಭ್ಯಾಸ – ಪಿಯುಸಿ**

**ಧರ್ಮಪತ್ನಿ – ವಾಣೀ**

**ಸುಪುತ್ರ – ಶಮಿತ್**

**ಯಕ್ಷಗಾನದ ಗುರುಗಳು – ಕರ್ಗಲ್ ವಿಶ್ವೇಶ್ವರ ಭಟ್**

**ಅರು ಮೇಳ ಕರ್ನಾಟಕ ಮಧೂರು ಧರ್ಮಸ್ಥಳ,**

**ಮೆಚ್ಚುಗೆ ಗಳಿಸಿದ ಪಾತ್ರಗಳು – ಸುಭದ್ರೆ, ಅಮ್ಮದೇವಿ, ಪೂತನಿ, ಮಾಯಾ ಅಜಮುಖಿ, ಸೀತಾ ಪರಿತ್ಯಾಗದ ಸೀತೆ,**

**ಅರುವ ಸೋಮನಾಥೇಶ್ವರಿ ಮೇಳದಲ್ಲಿ ಆರಂಭದ ತಿರುಗಾಟ**





**ಆಖುವಾಹನ ಬೆನಕ ಶುಭಕರ ಲೋಕವೆಲ್ಲವ ರಕ್ಷಿಸು।**
**ಕಾಕುಮತಿಗಳ ದೂರಮಾಡುತಲೈಕ್ಯಮತ್ಯವ ಹುಟ್ಟಿಸು।**
**ನಾಕಗೊಳಿಸುತ ರಸೆಯನಂದದಿ ಪೋಕಬುದ್ಧಿಯ ನೀಗಿಸು।**
**ವಾಕ್ಕಿಗೊಡೆಯನೆ ಸಿದ್ಧಿಬುದ್ಧಿಯ ಜಾಗರಿಸಿ ನೀ ಪಾಲಿಸು ॥**

**ನಾದ ನೂಪುರ ಯಕ್ಷ ಪತ್ರಿಕೆಯ ಸಮಸ್ತ ಓದುಗರಿಗೆ ಗೌರಿ ಗಣೇಶ ಪರ್ವದ ಹಾರ್ದಿಕ ಶುಭಾಶಯಗಳು**



**ಬಂದ ಗೌರಿಯ ನೋಡಿರೋ। ನೀವೆಲ್ಲರು। ಚಂದದಿ ತಲೆಬಾಗಿರೊ॥ಪ॥**
**ಇಂದುಶೇಖರನರಸಿ ಚಂದದಿ।**
**ಮಂದಭಾಗ್ಯರ ಹರಸಲೆನ್ನುತ।**
**ಮಂದಿರದ ಸಿರಿದ್ವಾರದೇಶದಿ।**
**ನಿಂದು ಕಾಯುತ ಕರೆವರೆಂದೂ॥ಅ.ಪ॥**

*ರಚನೆ – ಅಜಿತ ಕಾರಂತ ಟಿ.ವಿ.*

## ನಮ್ಮ ಲೈಬ್ರರಿ – ಯಕ್ಷಗಾನ ಪ್ರಸಂಗಗಳಲ್ಲಿ ದ್ರೌಪದಿ

ಮಹಾಭಾರತದ ನಾಯಕಿ ದ್ರೌಪದಿ ಕೇಂದ್ರೀಕೃತ ಯಕ್ಷಗಾನ ಪ್ರಸಂಗ ಸಾಹಿತ್ಯದ ಕುರಿತು ಮಾಹಿತಿ ಹಂಚಿಕೊಳ್ಳುತ್ತಿದ್ದೇನೆ. ದ್ರೌಪದಿ ಸ್ವಯಂವರ, ದ್ರೌಪದಿ ವಸ್ತ್ರಾಪಹರಣ ,ದ್ರೌಪದಿ ಪ್ರತಾಪ ಇವು ಮೂರೂ ಕಥಾನಕವುಳ್ಳ ಪ್ರಸಂಗಗಳನ್ನು ನಾವು ಯಕ್ಷಗಾನ ಪ್ರದರ್ಶನಗಳಲ್ಲಿ ನೋಡುತ್ತೇವೆ. ದ್ರೌಪದಿ ಸ್ವಯಂವರ ಯಕ್ಷಗಾನ ಪ್ರಸಂಗವನ್ನು ಪ್ರಖ್ಯಾತ ಯಕ್ಷಗಾನ ಕವಿ ಹಟ್ಟಿಯಂಗಡಿ ರಾಮ ಭಟ್ಟರು ಬರೆದಿದ್ದು, ಉಡುಪಿಯ ಶ್ರೀ ಮನ್ಮಧ್ವ ಗ್ರಂಥಾಲಯ ಇವರು 1950ರ ಸುಮಾರಿಗೆ ಪ್ರಕಟಿಸಿದ್ದಾರೆ ಇದು 1953ರಲ್ಲಿ ನಾಲ್ಕನೆಯ ಮುದ್ರಣ ಕಂಡಿದ್ದು ಒಟ್ಟಾರೆ ಐದಾರು ಸಾವಿರ ಪ್ರತಿಗಳು ಮುದ್ರಿತವಾಗಿದ್ದು ಕಂಡು ಬರುತ್ತದೆ. ಇದೇ ಕೃತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಮಹಾಭಾರತದ ಪ್ರಸಂಗಳು ಮಾಲಿಕೆಯ ಆರನೇ ಕೃತಿಯಾಗಿ ಕೂಡ ಪ್ರಕಟಿಸಿದ್ದಾರೆ. ಹಿರಿಯ ಯಕ್ಷಗಾನ ಕವಿ ದೇವಿದಾಸ ಕೂಡ ದ್ರೌಪದಿ ಸ್ವಯಂವರ ಎನ್ನುವ 490 ಪದ್ಯಗಳಿಂದ ಕೂಡಿದ ಯಕ್ಷಗಾನ ಪ್ರಸಂಗ ಪುಸ್ತಕ ಬರೆದಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಕಟಿತವಾಗಿದೆ. ಮತ್ತೊಬ್ಬ ಮೈಸೂರು ಪ್ರಾಂತ್ಯದ ಹಿರಿಯ ಯಕ್ಷಗಾನ ಕವಿ ಅಳಿಯ ಲಿಂಗರಾಜ ಬರೆದ ದ್ರೌಪದಿ ಸ್ವಯಂವರ ಯಕ್ಷಗಾನ ಪ್ರಸಂಗ ಕೃತಿ ಮೈಸೂರು ವಿವಿಯ ಕುವೆಂಪು ಅಧ್ಯಯನ ಕೇಂದ್ರದಿಂದ 2011ರಲ್ಲಿ ಪ್ರಕಟಿತವಾಗಿದೆ ಈ ಪ್ರಸಂಗ ಪುಸ್ತಕ ಸಾಂಪ್ರದಾಯಿಕ ಯಕ್ಷಗಾನ ಶೈಲಿಯ 426 ಪದ್ಯಗಳಿಂದ ರಚಿತವಾಗಿದೆ. ಇನ್ನೊಂದು ದ್ರೌಪದಿ ಸ್ವಯಂವರ ಯಕ್ಷಗಾನ ಕೃತಿಯನ್ನು ಹಿರಿಯ ಧಾರಾಪುರದ ತಿಮ್ಮಪ್ಪ ದಾಸರು ಮೂಡಲಪಾಯ ಯಕ್ಷಗಾನ ಶೈಲಿಯಲ್ಲಿ ರಚಿಸಿದ್ದು ವಾಜಪೇಯಂ ಗೋವಿಂದಯ್ಯನವರಿಂದ 1921ರಲ್ಲಿ( ಎರಡನೇ ಮುದ್ರಣ) ಪ್ರಕಟವಾಗಿದೆ. ಇವು ಹಳೆಯ ಪ್ರಸಂಗಳ ವಿವರಗಳಾದರೆ ಇತ್ತೀಚೀಗೆ ದ್ರೌಪದಿ ಸ್ವಯಂವರ ಪ್ರಸಂಗವನ್ನು ಖ್ಯಾತ ಪ್ರಸಂಗ ಕರ್ತ ಶ್ರೀ ಶ್ರೀಧರ ಡಿ ಎಸ್ ಮತ್ತು ಶ್ರೀ ಗಿಂಡಿಮನೆ ಮೃತ್ಯುಂಜಯ ಇವರು ಕೂಡ ರಚಿಸಿದ್ದಾರೆ. ನಿವೃತ್ತ ಇಂಜಿನಿಯರ್ ಆಗಿರುವ ಗಿಂಡಿಮನೆಯವರ ಎರಡನೇ ಕೃತಿ ಇದಾಗಿದ್ದು 2011ರಲ್ಲಿ ಪ್ರಕಟವಾಗಿದೆ. ಶ್ರೀಧರ್ ಡಿ ಎಸ್ ಅವರ ಪ್ರಸಂಗ ಪುಸ್ತಕವನ್ನು ಶ್ರೀ ದುರ್ಗಾಂಬ ಕಲಾ ಸಂಗಮದವರು ಪ್ರಕಟಿಸಿದ್ದು ೧೦೩ ಪದ್ಯಗಳಿಂದ ಕೂಡಿದ ಯಕ್ಷಗಾನ ತಾಳಮದ್ದಳೆ ಮತ್ತು ಪ್ರದರ್ಶನಕ್ಕೆ ಯೋಗ್ಯವಾದ ಕೃತಿಯಾಗಿದೆ. ದ್ರೌಪದಿ ಸ್ವಯಂವರ ಯಕ್ಷಗಾನ ಪ್ರಸಂಗವನ್ನು ಶ್ರೀನಿವಾಸ ಭಾಗವತ, ಜತ್ತಿ ಈಶ್ವರ ಭಾಗವತ ಮೊದಲಾದ ಯಕ್ಷ ಕವಿಗಳು ಕೂಡ ರಚಿಸಿರುವುದಾಗಿ ತಿಳಿದು ಬರುತ್ತದೆ.

ದ್ರೌಪದಿ ವಸ್ತ್ರಾಪಹರಣ ಮಹಾಭಾರತದ ಪ್ರಮುಖ ಘಟನೆ. ಈ ಕಥಾನಕ ಕುರಿತ ಯಕ್ಷಗಾನ ಪ್ರಸಂಗ ಸಾಹಿತ್ಯ ಅವಲೋಕಿಸಿದಾಗ ವಾರಂಬಳ್ಳಿ ವೆಂಕಪ್ಪಯ್ಯ ಎನ್ನುವ ಕವಿ 1930ರಲ್ಲಿ ಬರೆದು ಶ್ರೀ ಸದ್ಗುರು ದತ್ತಾತ್ರೆಯರಿಂದ ಪರಿಶೋಧಿಸಲ್ಪಟ್ಟು ಮಂಜಪ್ಪ ಹೊನ್ನಪ್ಪ ಬುಕ್ ಸೆಲ್ಲರ್ ಕುಮಟಾ ಇವರಿಂದ ಪ್ರಕಟವಾದ 237 ಪದ್ಯಗಳಿಂದ ರಚಿತವಾದ ಸುಂದರ ಯಕ್ಷಗಾನ ಪ್ರಸಂಗ ಪುಸ್ತಕ ಸಿಗುತ್ತದೆ. ಇನ್ನೊಂದು ಕೃತಿ ಕುಂದಾಪುರದ ಡಿ ವಿ ಹೊಳ್ಳ ವಿದ್ವಾನ್ ಇವರು ಬರೆದು ಉಡುಪಿಯ ಶ್ರೀ ಮನ್ಮಧ್ವ ಗ್ರಂಥಾಲಯದವರು 1941ರಲ್ಲಿ ಪ್ರಕಟಿಸಿದ ದ್ರೌಪದಿ ವಸ್ತ್ರಾಪಹಾರ ಅಥವಾ ಅಕ್ಷಯಾಂಬರ ವಿಲಾಸ. ಶ್ರೀಕಾಂತ ಶಾಸ್ತ್ರಿ ಹಿರೇಮಠ ಎನ್ನುವ ಕವಿ ಮೂಡಲಪಾಯ ಯಕ್ಷಗಾನ ಶೈಲಿಯಲ್ಲಿ ದ್ರೌಪದೀ ವಸ್ತ್ರಹರಣ ಎನ್ನುವ ಯಕ್ಷಗಾನ ಸಾಹಿತ್ಯ ರಚಿಸಿದ್ದು ಅದನ್ನು ಮೇ/ ಪಿ ಸಿ ಶಾಬಾದಿಮಠ ಬುಕ್ ಡೀಪೊ ಗದಗ ಇವರು 1982ರಲ್ಲಿ ಪ್ರಕಟಿಸಿದ್ದಾರೆ. ಗುಂಡೂ ಸೀತಾರಾಮ ಮತ್ತು ಹೊಸಬಾಳೆ ಪುಟ್ಟಪ್ಪ ಎನ್ನುವ ಯಕ್ಷಕವಿಗಳು ದ್ರೌಪದಿ ವಸ್ತ್ರಾಪಹರಣ ಪ್ರಸಂಗ ಬರೆದಿದ್ದಾರೆ

ಯಕ್ಷಗಾನ ಪ್ರದರ್ಶನಗಳಲ್ಲಿ ಬಹಳ ಪ್ರಸಿದ್ಧಿ ಪಡೆದಿರುವ ದ್ರೌಪದಿ ಪ್ರತಾಪ ಪ್ರಸಂಗವನ್ನು ಬರೆದ ಕವಿ ಕಡಂದಲೆ ರಾಮರಾಯರು. 1941ರ ಸಮಯದಲ್ಲಿ ಉಡುಪಿಯ ಶ್ರೀ ಮನ್ಮಧ್ವ ಗ್ರಂಥಾಲಯದವರು ಪ್ರಕಟಿಸಿದ ಈ ದ್ರೌಪದಿ ಪ್ರತಾಪ ಪ್ರಸಂಗ ಎಷ್ಟೊಂದು ಜಯಪ್ರಿಯವಾಯಿತೆಂದರೆ 1948, 1959,1972 ಹೀಗೆ 12ಕ್ಕೂ ಹೆಚ್ಚುಸಲ ಮುದ್ರಣಗೊಂಡು ಇಪ್ಪತ್ತು ಸಾವಿರಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿ ದಾಖಲೆ ನಿರ್ಮಿಸಿತು. ನವಭಾರತಿ ಪ್ರಕಾಶನ ಮೈಸೂರು ಇವರು 2012ರಲ್ಲಿ ಪುನಹ ಕಡಂದಲೆ ರಾಮರಾಯರ ದ್ರೌಪದಿ ಪ್ರತಾಪ ಪುಸ್ತಕವನ್ನು ಪ್ರಕಟಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಕೂಡ ಇದನ್ನು ಮುದ್ರಿಸಿದ್ದಾರೆ. ದ್ರೌಪದಿ ಪ್ರತಾಪ ಯಕ್ಷಗಾನ ಪ್ರಸಂಗವನ್ನು ಡಾ ಅಂಬೆಮೂಲೆ ಗೋವಿಂದ ಭಟ್ಟರು ಹವ್ಯಕ ಕನ್ನಡ ಭಾಷೆಯಲ್ಲಿ ರಚಿಸಿದ್ದು 2006ರಲ್ಲಿ ಪ್ರಕಟವಾಗಿದೆ. ದ್ರೌಪದಿ ಪ್ರತಾಪ ಯಕ್ಷಗಾನ ಪ್ರಸಂಗವನ್ನು ಸಂಕಯ್ಯ ಭಾಗವತರು ಕೂಡ ರಚಿದ್ದಾರೆಯೆಂದು ತಿಳಿದು ಬರುತ್ತದೆ ತುಳು ಭಾಷೆಯಲ್ಲಿ ಭದ್ರಗಿರಿ ನೀಲಯ್ಯ ಬಂಗೇರ ಕೂಡ ಈ ಪ್ರಸಂಗ ರಚನೆ ಮಾಡಿದ್ದಾರೆ.

(ಮಾಹಿತಿ ಋಣ– ಯಕ್ಷವಾಹಿನಿಯ ಪ್ರಸಂಗ ಪ್ರತಿ ಸಂಗ್ರಹ)

*ಉಮೇಶ ಶಿರೂರು ಬೆಂಗಳೂರು ದೂರವಾಣಿ 9448353910*

**ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ– 9449686807 ನಮ್ಮ ವೆಬ್ ಸೈಟ್ ವಿಳಾಸ– https://nyt.1ngo.in/ – ಸಂಪಾದಕರು**

**ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಶಸ್ತಿ**: ಕರ್ನಾಟಕ ಯಕ್ಷಗಾನ ಅಕಾಡೆಮಿ ೨೦೨೨ ನೇ ಸಾಲಿನ ವಿವಿಧ ಪ್ರಶಸ್ತಿಗಳನ್ನು ಪ್ರಕಟಿಸಿದೆ. ಅಕಾಡೆಮಿ ಅಧ್ಯಕ್ಷ ಜಿ ಎಲ್ ಹೆಗಡೆ ಪ್ರಶಸ್ತಿ ಪುರಸ್ಕೃತರ ಪಟ್ಟಿ ಬಿಡುಗಡೆ ಮಾಡಿದ್ದು ಪಾರ್ತಿ ಸುಬ್ಬ ಪ್ರಶಸ್ತಿಗೆ ಯಕ್ಷಗಾನ ಗುರುಗಳಾದ ಗಣೇಶ್ ಕೊಲೆಕಾಡಿಯವರು ಭಾಜನರಾಗಿದ್ದಾರೆ. ೨೦೨೨ ನೇ ಸಾಲಿನ



ಗೌರವ ಪ್ರಶಸ್ತಿಗೆ ತೆಂಕು ತಿಟ್ಟು ಯಕ್ಷಗಾನ ಕಲಾವಿದ ಪುತ್ತಿಗೆ ರಘುರಾಮ ಹೊಳ್ಳ ಭಾಗವತ ಪಟ್ಲ ಸತೀಶ್ ಶೆಟ್ಟಿ, ಮೂಡಲಪಾಯ ಯಕ್ಷಗಾನ ಭಾಗವತ ಹಾಗೂ ಕಲಾವಿದ ಚಂದಯ್ಯ (ತುಮಕೂರು) ಪಾರಂಪರಿಕ ಯಕ್ಷಗಾನ ಕಲಾವಿದ ಉಮೇಶ್ ಭಟ್ ಬಾಡ (ಉತ್ತರ ಕನ್ನಡ), ಬಡಗುತಿಟ್ಟು ಭಾಗವತ ಹಾಗು ಕಲಾವಿದ ಕೆಪಿ ಹೆಗಡೆ (ಉಡುಪಿ), ಆಯ್ಕೆಯಾಗಿದ್ದಾರೆ. ಯಕ್ಷ ಸಿರಿ ವಾರ್ಷಿಕ ಪ್ರಶಸ್ತಿಗೆ ೧೦ ಮಂದಿ ಸಾಧಕರನ್ನು ಆಯ್ಕೆ ಮಾಡಲಾಗಿದೆ. ಕೊಲ್ಯಾರು ರಾಜು ಶೆಟ್ಟಿ, ಯಕ್ಷಗಾನ ಕಲಾವಿದ (ಹೊರನಾಡು ಕನ್ನಡಿಗ), ಕೃಷ್ಣ ಗಾಣಿಗ ಕೋಡಿ, ಬಡಗುತಿಟ್ಟು (ಉಡುಪಿ), ಕೃಷ್ಣ ನಾಯ್ಕ ಜಿ. ಬೇಡ್ಕಣಿ, ಬಡಾಬಡಗು (ಉತ್ತರ ಕನ್ನಡ), ಶುಭಾನಂದ ಶೆಟ್ಟಿ, ...ು), ಬಾಲಕೃಷ್ಣ ನಾಯಕ್ – ಬಡಗುತಿಟ್ಟು ಪ್ರಸಾದನ (ಉಡುಪಿ) ಕವ್ವಾಳೆ ಗಣಪತಿ ಭಾಗವತ – ಬಡಾಬಡಗು (ಉತ್ತರ ಕನ್ನಡ) ಎ...



ಮೂಡಲಪಾಯ (ಬೆಂಗಳೂರು), ಡಿ ಭೀಮಯ್ಯ – ಮೂಡಲಪಾಯ (ತುಮಕೂರು) ಕೊಲ್ಲೂರು ಕೊಗ್ಗ ಆಚಾರ್ಯ ಬಡಗುತಿಟ್ಟು ಹಿಮ್ಮೇಳ (ಉಡುಪಿ), ಹಾಗೂ ಅಜಿತ್ ಕುಮಾರ್ ಜೈನ್, ತೆಂಕು ತಿಟ್ಟು (ಉಡುಪಿ) ದತ್ತಿ ನಿಧಿ ಪ್ರಶಸ್ತಿ : ಕರ್ಕಿ ಹಿರಿಯ ಪರಮಯ್ಯ ಹಾಸ್ಯಗಾರ ಪ್ರಶಸ್ತಿಗೆ ಪಾರಂಪರಿಕ ಯಕ್ಷಗಾನ ಕಲಾವಿದ ಹುಕ್ಕಲಮಕ್ಕಿ ಕಮಲಾಕರ ಹೆಗಡೆ (ಉತ್ತರ ಕನ್ನಡ) ಭಾಜನರಾಗಿದ್ದಾರೆ. ೨೦೨೧ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಮಂಗಳೂರಿನ ಪೊಳಲಿ ನಿತ್ಯಾನಂದ ಕಾರಂತರ ಯಕ್ಷಗಾನ ಪ್ರಸಂಗ ಸಂಪುಟ, ಬೆಳಗಾವಿಯ ಎಲ್ ಎನ್ ಶಾಸ್ತ್ರಿ ಅವರ ಯಕ್ಷಗಾನ ನಕ್ಷತ್ರಗಳು ಹಾಗೂ ಬೆಂಗಳೂರಿನ ವಿದ್ಯಾರಶ್ಮಿ ಪೆಲತ್ತಡ್ಕ ಅವರ ಯಕ್ಷಗಾನ ಲೀಲಾವಳಿ ಕೃತಿಗಳು ಆಯ್ಕೆಯಾಗಿವೆ. ಪ್ರಶಸ್ತಿ ಪ್ರದಾನ ಸಮಾರಂಭವು ಸೆಪ್ಟೆಂಬರ್ ಎರಡು ಅಥವಾ ಮೂರನೇ ವಾರದಲ್ಲಿ ಉಡುಪಿಯ ಕಮಲಶಿಲೆಯಲ್ಲಿ ನಡೆಯಲಿದೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ ಸುನಿಲ್ ಕುಮಾರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಜಿ ಎಲ್ ಹೆಗಡೆ ತಿಳಿಸಿದ್ದಾರೆ